ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 29 ಸೆಪ್ಟೆಂಬರ್ 30, 1979 40 ಪೈಸೆ

ಚೈನಾದ ಕ್ರಾಂತಿಯು ಚಿರಾಯುವಾಗಲಿ

ಅಕ್ಟೋಬರ್ 1, ಚೈನಾ ಕ್ರಾಂತಿಯ ದಿನ. ಮೂವತ್ತು ವರ್ಷಗಳ ಹಿಂದೆ ಅಕ್ಟೋಬರ್ 1, 1949 ರಂದು ಚೈನಾದಲ್ಲಿ ಮಹಾ ನಾಯಕ ಮಾವೊತ್ಸೆತುಂಗ್‌ರವರ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿಗಳ ಮತ್ತು ಪಾಳೆಯಗಾರರ ವಿರುದ್ಧ ದೀರ್ಘ ಕಾಲದ ಸಶಸ್ತ್ರ ಹೋರಾಟ ನಡೆಸಿ ಕ್ರಾಂತಿಯನ್ನು ಯಶಸ್ವಿಗೊಳಿಸಿ ಜನತಾ ಪ್ರಜಾಪ್ರಭುತ್ವ ಸರಕಾರವನ್ನು ಕಮ್ಯುನಿಸ್ಟ್ ಪಾರ್ಟಿಯು ಸ್ಥಾಪಿಸಿತು. ಚೈನಾದ ಈ ವಿಮೋಚನೆ ಅತ್ಯಂತ ಚಾರಿತ್ರಿಕವಾದುದಾಗಿದೆ. ಅಂದಿನಿಂದ ಈ ವರೆಗೆ ಸಾಮ್ರಾಜ್ಯಶಾಹಿಗಳ ಎಲ್ಲ ಪಿತೂರಿಗಳನ್ನು ಯಶಸ್ವಿಯಾಗಿ ಎದುರಿಸಿಕೊಂಡು ಸಮಾಜವಾದಿ ಚೈನಾ ಮುಂದುವರಿದಿದೆ.

ಕಳೆದ ಮೂವತ್ತು ವರ್ಷಗಳಲ್ಲಿ ಚೈನಾ ತುಂಬಾ ಪ್ರಗತಿ ಹೊಂದಿದೆ. 1978 ರಲ್ಲಿ ಕೆಲವು ಕ್ಷೇತ್ರಗಳಲ್ಲಿ ಅವರ ಆರ್ಥಿಕ ಸಾಧನೆಗಳ ಬಗ್ಗೆ ಸರಕಾರ ನೀಡಿದ ವರದಿಯಲ್ಲಿ ಅದು ಸ್ಪಷ್ಟವಾಗುತ್ತದೆ. ಉದಾಹರಣೆಗೆ 1978 ರಲ್ಲಿ ಅವರ ವ್ಯವಸಾಯೋತ್ಪನ್ನದಲ್ಲಿ ಶೇಕಡ 8.9 ರಷ್ಟು ಹೆಚ್ಚಾಗಿದೆ. ಹಾಗೆನೇ ಕೈಗಾರಿಕೋತ್ಪನ್ನದಲ್ಲಿ ಶೇ. 13.5 ರಷ್ಟು ಹೆಚ್ಚಾಗಿದೆ.

ಸಂಪಾದಕೀಯ

ಬಂಡವಾಳಶಾಹಿ ಜಗತ್ತಿನಲ್ಲಿ ಆರ್ಥಿಕ ಮುಗ್ಗಟ್ಟು ಆಳವಾಗಿಕೊಂಡು ಬರುತ್ತಿದ್ದು ನಿರುದ್ಯೋಗ ಹೆಚ್ಚಾಗುತ್ತಿದ್ದು, ಕಾರ್ಮಿಕರ ವಾಸ್ತವ ಆದಾಯವು ಇಳಿಮುಖವಾಗುತ್ತಿರುವಾಗ, ಹಿಂದುಳಿದ ರಾಷ್ಟ್ರಗಳು ಬಂಡವಾಳಶಾಹಿ ಪಥದಲ್ಲಿ ಹೋಗಲು ಪ್ರಯತ್ನಿಸುತ್ತಿರುವಾಗ ಆ ದೇಶಗಳಲ್ಲಿ ದುಡಿಯುವ ಜನತೆ ಹೆಚ್ಚೆಚ್ಚು ಬಡತನ ದಾರಿದ್ರ್ಯಗಳಿಗೆ ತುತ್ತಾಗುತ್ತಿರುವಾಗ ಚೈನಾದ ಸಮಾಜವಾದಿ ಆರ್ಥಿಕ ವ್ಯವಸ್ಥೆಯು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆದಿರುವುದನ್ನು ನಾವು ನೋಡಬಹುದು. 1978 ರಲ್ಲಿ ಚೈನಾದ ಆಹಾರ ಧಾನ್ಯಗಳ ಉತ್ಪಾದನೆ 305 ಮಿಲಿಯ ಟನ್; ಆದರೆ ಭಾರತದ ಉತ್ಪಾದನೆ 125.6 ಮಿಲಿಯ ಟನ್‌ಗಳು. ಚೈನಾದ ಉಕ್ಕಿನ ಉತ್ಪಾದನೆ 31.5 ಮಿಲಿಯ ಟನ್ ಆಗಿದ್ದರೆ, ಭಾರತದಲ್ಲಿ 7.74 ಮಿಲಿಯ ಟನ್ ಮಾತ್ರ. ಕಲ್ಲಿದ್ದಲು ಉತ್ಪಾದನೆ ಚೈನಾದಲ್ಲಿ 600 ಮಿಲಿಯ ಟನ್ ಆಗಿದ್ದರೆ ಭಾರತದಲ್ಲಿ 31.5 ಮಿಲಿಯ ಟನ್ ಮಾತ್ರ. 1949 ರಲ್ಲಿ ಚೈನಾ ಭಾರತಕ್ಕಿಂತಲೂ ಹೆಚ್ಚು ಹಿಂದುಳಿದ ರಾಷ್ಟ್ರವಾಗಿತ್ತೆಂಬುದನ್ನು ಗಮನಿಸಿದರೆ ಸಮಾಜವಾದಿ ವ್ಯವಸ್ಥೆಗೂ, ಬಂಡವಾಳ ಪಥದಲ್ಲಿ ಮುಂದುವರಿಯುವ ಭಾರತಕ್ಕೂ ಇರುವ ವ್ಯತ್ಯಾಸವು ಎದ್ದು ಕಾಣುತ್ತದೆ.

ಈಗ ಅಧಿಕಾರಕ್ಕೆ ಬಂದ ಹೊಸ ಸರ್ಕಾರ ಚೈನಾದಲ್ಲಾದ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಚೈನಾದ ಬೆಳವಣಿಗೆಗೆ ಹೊಸ ಕಾರ್ಯಕ್ರಮಗ

[ಕಡೆಯ ಪುಟ ನೋಡಿ]

ಬೀಡಿ ಕಾರ್ಮಿಕರ ಬೃಹತ್ ಪ್ರತಿಭಟನಾ ಸಭೆ

ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರೇ ಸೇರಿದ್ದ ಐದು ಸಹಸ್ರ ಬೀಡಿ ಕಾರ್ಮಿಕರ ಬೃಹತ್ ಮೆರವಣಿಗೆಯು 24-9-79 ರಂದು ಮಂಗಳೂರಿನ ಕಂಕನಾಡಿಯಿಂದ ಹೊರಟು ಜಿಲ್ಲಾಧಿಕಾರಿಯವರ ಕಛೇರಿಯ ಆವರಣದೊಳಕ್ಕೆ ಹೋಗಿ, ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಲಾಯಿತು. ಬಂಟ್ವಾಳ ಮಂಗಳೂರು, ಉಡುಪಿ ಮತ್ತು ಇತರೆಲ್ಲಾ ತಾಲ್ಲೂಕುಗಳಿಂದ ಬಂದು ಸೇರಿದ ಸಹಸ್ರಾರು ಬೀಡಿಕಾರ್ಮಿಕರ ಈ ಪ್ರತಿಭಟನಾ ಕಾರ್ಯಕ್ರಮವು ಚರಿತ್ರಾರ್ಹವಾಗಿತ್ತು. ದ.ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನ್ ಅಧ್ಯಕ್ಷ ಕಾಂ. ಪಿ. ರಾಮಚಂದ್ರರಾವ್ ಮತ್ತು ಕಾರ್ಯದರ್ಶಿ ಕಾಂ. ಮೂಸಬ್ಬನವರ ನೇತೃತ್ವದಲ್ಲಿ ನಿಯೋಗವೊಂದು ತೆರಳಿ ಜಿಲ್ಲಾಧಿಕಾರಿಯವರು ಇರದಿದ್ದ ಕಾರಣ ಅವರ ಸಹಾಯಕ ಅಧಿಕಾರಿಗೆ ಮನವಿಯನ್ನು ಸಲ್ಲಿಸಿತು. ಬಳಿಕ ನೆಹರು ಮೈದಾನದಲ್ಲಿ ಕಾಂ. ಯು. ಬಿ. ಲೋಕಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಬೃಹತ್ ಸಭೆಯನ್ನುದ್ದೇಶಿಸಿ ಕಾಂ. ಪಿ. ರಾಮಚಂದ್ರರಾವ್ ಮತ್ತು ಕಾಂ. ಪೂವಯ್ಯ ಬಂಗೇರ ಅವರು ಮಾತನಾಡಿದರು. ಬೇಡಿಕೆಗಳು ಈಡೇರದಿದ್ದಲ್ಲಿ ತೀವ್ರ ಚಳುವಳಿ ನಡೆಸಲು ಕರೆ ಇತ್ತರು. ಕಾಂ. ಮೂಸಬ್ಬನವರು ಸ್ವಾಗತಿಸಿದರು.

ಕಂಟ್ರಾಕ್ಟ್ ಪದ್ಧತಿಯನ್ನು ಸಂಪೂರ್ಣ ರದ್ದುಗೊಳಿಸಬೇಕು; ಸಾವಿರ ಬೀಡಿಗೆ ಕನಿಷ್ಟ ರೂ. 9/- ಕೂಲಿ ದೊರೆಯಬೇಕು; ಕಾನೂನು ಬಾಹಿರವಾಗಿ ಬೀಡಿ ಕಾರ್ಮಿಕರಿಂದ ವಸೂಲಿ ಮಾಡುವ ದಂಡವನ್ನು ನಿಲ್ಲಿಸಬೇಕು; ಮಹಿಳಾ ಕಾರ್ಮಿಕರಿಗೆ ಸಕಾಲದಲ್ಲಿ ಹೆರಿಗೆ ಸವಲತ್ತುಗಳನ್ನು ಒದಗಿಸಬೇಕು; ಎಲ್ಲಾ ಬೀಡಿ ಕಾರ್ಮಿಕರಿಗೆ ವೈದ್ಯಕೀಯ ಸವಲತ್ತುಗಳನ್ನು ಒದಗಿಸಬೇಕು; ಕಾನೂನು ಪ್ರಕಾರದಂತೆ ಬೀಡಿ ಕಾರ್ಮಿಕರಿಗೆ ಸವಲತ್ತು ಸಿಗಬೇಕು ಎಂಬುದೇ ಬೇಡಿಕೆಗಳು ಮನವಿಯಲ್ಲಿ ಸೇರಿದ್ದವು. ಬೇಡಿಕೆಗಳನ್ನು ಈಡೇರಿಸುವಲ್ಲಿ ಸರಕಾರವು ವಿಫಲವಾದರೆ, ತೀವ್ರ ಚಳುವಳಿಯನ್ನು ಸಂಘಟಿಸಲು ಬೀಡಿಕಾರ್ಮಿಕರು ಮುಂದಾಗಿರುವರು.

●

ಬನ್ಸೀಲಾಲರ ವಿರುದ್ಧ ಕೇಸನ್ನು ಹಿಂತೆಗೆದುದರ ಹಿನ್ನೆಲೆ

"ಜನತಾ - ಕಾಂಗ್ರೆಸ್ (ಐ) ಮೈತ್ರಿಯ ಬೆಲೆ"

ಹರಿಯಾಣದ ಮುಖ್ಯಮಂತ್ರಿ ಭಜನ್‌ಲಾಲ್ ತಮ್ಮ ಮಂತ್ರಿಮಂಡಳ ಉರುಳುವುದನ್ನು ತಪ್ಪಿಸಿ ಹೇಗಾದರೂ ಅಧಿಕಾರದಲ್ಲಿ ಉಳಿಯಲು ಪ್ರಯತ್ನಿಸುತ್ತಿದ್ದಾರೆ. ಜನತಾಪಕ್ಷ ಅಧಿಕಾರದಲ್ಲಿರುವ ಹರಿಯಾಣದಲ್ಲಿ, ಇತ್ತೀಚೆಗೆ ಕೇಂದ್ರದ ಮಾಜಿ ನೌಕಾಸಾರಿಗೆ ಮಂತ್ರಿ ಚಾಂದರಾಂ ಜನತಾಪಕ್ಷಕ್ಕೆ ರಾಜೀನಾಮೆ ನೀಡಿ, ಜನತಾ (ಎಸ್) ಪಕ್ಷಕ್ಕೆ (ಈಗ ಲೋಕದಲ) ಸೇರಿರುವುದರಿಂದ ಶಾಸನ ಸಭೆಯಲ್ಲಿ ಮಂತ್ರಿಮಂಡಳ ಅಲ್ಪಸಂಖ್ಯೆಗೆ ಉಳಿದಿದೆ. ಆದ್ದರಿಂದ, ತಮ್ಮ ಸರಕಾರವನ್ನು ಉಳಿಸಿಕೊಳ್ಳಲು ಸಂಜಯಗಾಂಧಿ ಹಿಂಬಾಲಕ ಶ್ರೀ ಬನ್ಸೀಲಾಲ್‌ರವರ ಬೆಂಬಲ ಪಡೆಯಲು ನಿರ್ಧರಿಸಿದ್ದಾರೆ.

ಬನ್ಸೀಲಾಲರ ಬೆಂಬಲ ಪಡೆಯಲು, ಜನತಾಪಕ್ಷ ನೀಡಲು ಸಿದ್ಧವಾಗಿರುವ ಬೆಲೆಯಾದರೂ ಏನು? ತುರ್ತು ಪರಿಸ್ಥಿತಿಯಲ್ಲಿ ಬನ್ಸೀಲಾಲ್ ಮತ್ತವರ ಪರಿವಾರದವರು ಎಸಗಿದ ದೌರ್ಜನ್ಯಗಳ ವಿಚಾರಣೆಗೆ ನೇಮಿಸಿದ ತನಿಖಾ ಆಯೋಗ, ಎತ್ತಿಹಿಡಿದಿರುವ ಆರೋಪಗಳಲ್ಲಿ, ಬನ್ಸೀಲಾಲ್ ಮತ್ತವರ ಮಗ ನೇರವಾಗಿ ಆರೋಪಕ್ಕೆ ಗುರಿಯಾಗಿರುವ ಕೆಲವು ಕ್ರಿಮಿನಲ್ ಆರೋಪಗಳನ್ನು ಸರಕಾರ ಹಿಂದಕ್ಕೆ ಪಡೆಯಲಿದೆ.

ತನಿಖಾ ಆಯೋಗ ಬಹಿರಂಗ ಪಡಿಸಿರುವ ವಿಷಯಗಳಿಂದ, ಬನ್ಸೀಲಾಲರು ಅತ್ಯಂತ ಹೀನ ಕೆಲಸಗಳನ್ನು ತುರ್ತುಪರಿಸ್ಥಿತಿಯಲ್ಲಿ ಎಸಗಿದ್ದಾರೆಂದು ಸ್ಪಷ್ಟವಾಗಿದೆ. ವರದಿ ಬಹಿರಂಗಪಟ್ಟ ನಂತರ, ಜನಗಳ ಆಕ್ರೋಶ ಬನ್ಸೀಲಾಲರ ವಿರುದ್ಧ ಎಷ್ಟು ತೀವ್ರವಾಗಿದೆಯೆಂದರೆ, ತುರ್ತುಪರಿಸ್ಥಿತಿಯ ನಿರ್ಮಾಪಕಿ ಶ್ರೀಮತಿ ಇಂದಿರಾಗಾಂಧಿಯವರೇ, ಬನ್ಸೀಲಾಲರನ್ನು ತಮ್ಮ ಪಕ್ಷದಿಂದ ಹೊರಗೆ ಹಾಕಬೇಕಾಯಿತು.

ತುರ್ತು ಪರಿಸ್ಥಿತಿಯ ತಪ್ಪಿತಸ್ಥರನ್ನು ಶಿಕ್ಷಿಸುವುದಾಗಿ ..ಜನತಾಪಕ್ಷ, ಪದೇ, ಪದೇ ಜನಗಳಿಗೆ ಭರವಸೆ ನೀಡಿತ್ತು. ಆದರೆ, ಈಗ ಮುಖ್ಯ ಮಂತ್ರಿ ಭಜನ್‌ಲಾಲ್, ತಮ್ಮ ಸಂಪುಟದ ಸಹೋದ್ಯೋಗಿಗಳ ಬಳಿ ಸಹಾ ಚರ್ಚೆ ಮಾಡದೆ, ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿದ್ದಾರೆ.

ಒಂದು ಕಡೆ ಜನತಾ ಪಕ್ಷದ ಅಧ್ಯಕ್ಷ ಶ್ರೀ ಚಂದ್ರಶೇಖರ್ ಹಾಗೂ ಬಾಬೂ ಜಗಜೀವನರಾಮ್‌ರವರು ತಮ್ಮ ಪಕ್ಷಕ್ಕೂ, ಕಾಂಗ್ರೆಸ್ (ಐ) ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲವೆಂದು ದಿನನಿತ್ಯ ಹೇಳಿಕೆ ಕೊಡುತ್ತಿದ್ದಾರೆ. ಆದರೆ, ಜನಗಳ ಎದುರಿಗೆ ಯಾವುದೇ ನಾಚಿಕೆಯಿಲ್ಲದಂತೆ, ಅವಕಾಶವಾದಿ ಮೈತ್ರಿಯನ್ನು ಮಾಡಿಕೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಶ್ರೀಮತಿ ಇಂದಿರಾಗಾಂಧಿಯವರು, ಬನ್ಸೀಲಾಲರನ್ನು ರಾಜಕೀಯದಲ್ಲಿ ಪುನರ್ ಪ್ರವೇಶ ಕೊಡಿಸಲು ತೀವ್ರವಾಗಿ ಪ್ರಯತ್ನಿಸುತ್ತಿದ್ದಾರೆ, ಇದಕ್ಕೆ ಶ್ರೀ ಭಜನ್‌ಲಾಲ್ ಸಕ್ರಿಯ ಸಹಾಯ ಮಾಡುತ್ತಿದ್ದಾರೆ. ಆದರೆ, ಹರಿಯಾಣದ ಜನತೆಯಾಗಲಿ, ರಾಷ್ಟ್ರದ ಇತರೆ ಜನ ವಿಭಾಗವಾಗಲಿ, ಇಷ್ಟು ಬೇಗ ಬನ್ಸೀಲಾಲರು ಜನತೆಯ ಮೇಲೆ ಎಸಗಿದ ಕ್ರೂರ ಅತ್ಯಾಚಾರಗಳನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ತಮ್ಮ ಅಧಿಕಾರದ ಅವಧಿಯಲ್ಲಿ, ಮಧ್ಯವಯಸ್ಸಿನ ಸಹೋದರ, ಸಹೋದರಿಯರನ್ನು ಪೋಲೀಸ್ ಠಾಣೆಗೆ ಕರೆಸಿ, ನಗ್ನರನ್ನಾಗಿ ಮಾಡಿ, ಇಬ್ಬರನ್ನೂ ಜೊತೆಯಲ್ಲಿ ಮಲಗುವಂತೆ ಒತ್ತಾಯ ಮಾಡಿದ್ದು, ತನ್ನ ಸಂಬಂಧಿಗಳು ಹೋಟೆಲ್ ಕಟ್ಟಲು ಕಡಿಮೆ ಬೆಲೆಯಲ್ಲಿ ಜಾಗ ಬಿಡಿಸಿಕೊಳ್ಳಲು, ಶತಮಾನದಷ್ಟು ಪುರಾತನ ಚಾರಿತ್ರಿಕ ಪ್ರದೇಶವನ್ನು ನೆಲಸಮ ಮಾಡಿದ್ದು, ಸಂಜಯ ಗಾಂಧಿಯವರ ಮಾರುತಿ ಕಾರು ಕಾರ್ಖಾನೆ ಕಟ್ಟಲು, ಸಾವಿರಾರು ಬಡ ರೈತರನ್ನು ಅಲ್ಪ ಬೆಲೆ ಕೊಟ್ಟು ಅವರ ಜಮೀನುಗಳಿಂದ ಓಡಿಸಿದ್ದು, ಇವೆಲ್ಲವೂ ಜನತೆಯ ನೆನಪಿನಲ್ಲಿ ಹಸಿ, ಹಸಿಯಾಗಿವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೊ ಈ ಸಮಯ ಸಾಧಕ ಮೈತ್ರಿಯನ್ನು ಖಂಡಿಸುತ್ತದೆ.

[ಕಡೆಯ ಪುಟ ನೋಡಿ]

ಜನತಾ ಪಕ್ಷದ ಪತನಕ್ಕೆ ಮೊರಾರ್ಜಿಯೇ ಕಾರಣ – ಎಂ. ಕೆ. ಭಟ್

ಜನರಲ್ಲಿ ತುಂಬ ಆಸೆಗಳನ್ನು ಉಂಟುಮಾಡಿದ್ದ ಜನತಾಪಕ್ಷ ಅಧಿಕಾರ ಮತ್ತು ಜನತೆಯ ವಿಶ್ವಾಸಗಳನ್ನು ಕಳೆದುಕೊಳ್ಳಲು ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿಯವರೇ ಕಾರಣವೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಶಾಖೆಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್‌ರವರು ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ ನುಡಿದರು. ಪಕ್ಷದ ಉಡುಪಿ ತಾಲ್ಲೋಕು ಸಮಿತಿ ಆಶ್ರಯದಲ್ಲಿ ತಾ. 18-9-79 ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದ ಅವರು, ಜನಗಳಿಗೆ ವ್ಯಕ್ತಿ ಸ್ವಾತಂತ್ರ್ಯ ಮುಂತಾದ ನಾಗರೀಕ ಹಕ್ಕುಗಳನ್ನು ಮರಳಿಸುವುದಾಗಿ ಹೇಳಿ ಅಧಿಕಾರಕ್ಕೇರಿದ ಜನತಾಪಕ್ಷ, ತನ್ನ ಅಧಿಕಾರದ ಅಂತಿಮಗಳಲ್ಲಿ ಮತ್ತೆ "ಮೀಸಾ" ಕಾನೂನನ್ನು ತರಲು ಹೊರಟಿದ್ದನ್ನು ಜ್ಞಾಪಿಸಿದರು. ದೇಶಾದ್ಯಂತ ಮತೀಯ ಗಲಭೆಗಳು, ಹರಿಜನರ ಸಜೀವ ದಹನ, ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿದ್ದು, ಜನತಾಪಕ್ಷ ತನ್ನ ಮಿತ್ರರನ್ನು ಕಳೆದುಕೊಳ್ಳುವಂತೆ ಮಾಡಿತು. ಜನಸಂಘದ ನೇತೃತ್ವದಲ್ಲಿರುವ ಮಧ್ಯಪ್ರದೇಶ ಸರಕಾರ 'ಮಿನಿ ಮೀಸಾ' ತಂದಾಗ ವಿರೋಧ ಪಕ್ಷಗಳ ಪ್ರತಿಭಟನೆಯನು ಲೆಕ್ಕಕ್ಕೆ ತೆಗೆದುಕೊಳ್ಳದೆ ಅಲಕ್ಷಿಸಿದ ಮೊರಾರ್ಜಿಯವರು, ಮಿತ್ರಪಕ್ಷಗಳು ನೀಡಿದ ಸಲಹೆಗಳಿಗೂ ಕಿವಿಗೊಡದೆ ಮೂತ್ರ ಕುಡಿದ ಮತ್ತಿನಲ್ಲಿಯೇ ಉಳಿದದ್ದರಿಂದ ಹೀಗಾಯಿತು ಎಂದರು. ಸರಕಾರ ಉರುಳಿದ ನಂತರವೂ ನಾಯಕ ಸ್ಥಾನ ಬಿಡದೆ ಹಟಮಾಡಿದ ಮೊರಾರ್ಜಿಯವರು ಈಗ ಜಗಜೀವನರಾಂ ಬಗ್ಗೆ ಪ್ರಲಾಪಿಸುವುದರ ಔಚಿತ್ಯವೇನೆಂದು ಪ್ರಶ್ನಿಸಿದರು.

ಭಾರತ ವಿದ್ಯಾರ್ಥಿ ಫೆಡರೇಶನ್ನಿನ ರಾಜ್ಯ ಶಾಖೆ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸೇನ್ ಮಾತನಾಡುತ್ತಾ, ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜಕೀಯ ಪಕ್ಷಗಳು ನೀಡುವ ಆಶ್ವಾಸನೆಗಳನ್ನೇ ನಂಬಿಕೊಳ್ಳದೆ, ಜನತೆ ಪ್ರತಿಯೊಂದು ರಾಜಕೀಯ ಪಕ್ಷದ ಚರಿತ್ರೆಯನ್ನೂ ಪರಿಶೀಲಿಸಬೇಕಾಗುತ್ತದೆ ಎಂದರು. ಗೋಹತ್ಯಾ ಪ್ರಶ್ನೆ ಹಾಗೂ ದುಡಿಯುವ ವರ್ಗವನ್ನು ಒಡೆಯುವ ಪ್ರಶ್ನೆ ಬಂದಾಗೆಲ್ಲಾ ಇಂದಿರಾ ಕಾಂಗ್ರೆಸ್ ಮತ್ತು ಜನಸಂಘಗಳು ಒಂದೇ ಎಂಬುದು ಸ್ಪಷ್ಟವಾಗಿರುವುದರಿಂದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಕ್ಕೂಟ ಮಾತ್ರ ಸದ್ಯದ ರಾಜಕೀಯ ಗೊಂದಲವನ್ನು ನಿವಾರಿಸಲು ಸಾಧ್ಯವೆಂದರು.

ಅಧ್ಯಕ್ಷತೆ ವಹಿಸಿದ್ದ, ಕರ್ನಾಟಕ ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾಯರು, ಕಾಂಗ್ರೆಸ್ ಮತ್ತು ಜನತಾ ಪಕ್ಷಗಳ ಅಧಿಕಾರದ ಅವಧಿಯಲ್ಲಿ ಪ್ರಯೋಜನ ಪಡೆದವರು ಬಂಡವಾಳಶಾಹಿಗಳು, ಭೂ ಮಾಲೀಕರು ಹಾಗೂ ಜಾತೀಯವಾದಿ ಆರ್. ಎಸ್. ಎಸ್. ನವರು ಮಾತ್ರ. ಸರ್ವಾಧಿಕಾರಿ ಶಕ್ತಿಗಳು ಹಾಗೂ ಜಾತೀಯವಾದಿ ಶಕ್ತಿಗಳನ್ನು ಅಡಗಿಸುವವರೆಗೆ ಈ ದೇಶದ ರಾಜಕೀಯ ಅಭದ್ರತೆ ಹೋಗುವುದಿಲ್ಲ. ದುಡಿಯುವ ವರ್ಗಕ್ಕೆ ನ್ಯಾಯ ಸಿಗಲು ಸಾಧ್ಯವಿಲ್ಲವೆಂದರು.

ಕಾಂ. ಡೇವಿಡ್ ಕರ್ಕಡರವರು ಪ್ರಾರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

○

ಪಿ. ಡಬ್ಲ್ಯೂ. ಡಿ. ಕಾರ್ಮಿಕರಿನ್ನು ಮೋಸ ಹೋಗಲಾರರು

ರಾಜ್ಯ ಸರ್ಕಾರದ ಪಿ.ಡಬ್ಲ್ಯೂ. ಡಿ. ಮತ್ತು ನೀರಾವರಿ ಇಲಾಖೆಯಲ್ಲಿ ದಿನಗೂಲಿಯ ಮೇಲೆ ಕಾರ್ಮಿಕರನ್ನು ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ. ಇವರು ಸುಮಾರು 10 ಸಾವಿರ ಜನರಿದ್ದಾರೆ. ಇವರೆಲ್ಲಾ ಖಾಯಂ ಕಾರ್ಮಿಕರೇ ಆಗಿದ್ದರೂ, ಅದೆಷ್ಟೋ ವರ್ಷಗಳಿಂದ ಇವರಿಗೆ ಯಾವುದೇ ಸೌಲಭ್ಯಗಳನ್ನು ಕೊಡದೆ ಅಮಾನವೀಯವಾಗಿ ದುಡಿಸಿಕೊಳ್ಳಲಾಗುತ್ತಿದೆ. ಜೀವನಪರ್ಯಂತ ಕೆಲಸ ಮಾಡಿದವರು ಯಾವುದೇ ಸೌಲಭ್ಯವಿಲ್ಲದೆ ನಿವೃತ್ತರಾಗುತ್ತಿದ್ದಾರೆ.

ಈ ಥರದ ಕಾರ್ಮಿಕರನ್ನು ಅವರಿಗೆ ಸಿಗುತ್ತಿರುವ ಕೂಲಿ ಆಧಾರದ ಮೇಲೆ 8 ವಿಭಾಗಗಳಾಗಿ ವಿಂಗಡಿಸಬಹುದು ;

(1) ಪದವೀದರರಿಗೆ ದಿನವೊಂದಕ್ಕೆ 11 ರೂಪಾಯಿ
(2) ಮೋಟಾರ್ ಚಾಲಕರಿಗೆ ರೂ. 10
(3) ಪಿ. ಟಿ ಪಿ. ದಿಂದ ಬಂದವರಿಗೆ ರೂ. 8
(4) ಮೆಟ್ರಿಕ್ ಮುಗಿಸಿದವರಿಗೆ ರೂ. 6
(5) ಕ್ಲೀನರ್ಸ್‌ಗೆ ರೂ. 7
(6) ಕಸಗುಡಿಸುವವರಿಗೆ ರೂ. 5
(7) ಗೂರ್ಖಾಗಳಿಗೆ ರೂ. 4-25
(8) ಶ್ರಮಿಕರಿಗೆ ರೂ. 8-25

ಈ ಬಡ ಕಾರ್ಮಿಕರಿಗೆ ದಿನಗೂಲಿ ಹೆಚ್ಚಿಸಬೇಕೆಂದು ಆಗಿನ ಮಂತ್ರಿ ಬಂಗಾರಪ್ಪನವರಿಗೆ ಮನವಿ ಸಲ್ಲಿಸಿದ್ದಾಗ, ಈ ಕಾರ್ಮಿಕರಿಗೆ ಕನಿಕರದಿಂದ ಕೂಲಿ ಕೊಡಲಾಗುತ್ತಿದೆ. ಅವರಿಗೇನೂ ಕೆಲಸವಿಲ್ಲ ಎಂದು ಗರ್ವದಿಂದ ಉತ್ತರವಿತ್ತಿದ್ದರು.

ಆದರೆ ಈ ಕಾರ್ಮಿಕರಿನ್ನು ಮೋಸ ಹೋಗಲಾರರು. ಈಗಾಗಲೇ ಬೀದರ್ ಜಿಲ್ಲೆಯಲ್ಲಿ ಸಂಘಟಿತರಾಗಿ ಹೋರಾಟ ಮಾಡಿದ್ದಾರೆ ರಾಯಚೂರಿನಲ್ಲಿ ಚಂದ್ರಶೇಖರ ಬಾಳೆಯವರ ನೇತೃತ್ವದಲ್ಲಿ ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ.

●

ಮೈಸೂರಿನಲ್ಲಿ ಬಹಿರಂಗ ಸಭೆ

ತಾ. 13-9-79 ರಂದು ಸಿ.ಐ.ಟಿ.ಯು. ರಾಜ್ಯ ಸಮಿತಿಯ ಕರೆಯಂತೆ ಮೈಸೂರು ನಗರದಲ್ಲಿರುವ ಕಾರ್ಮಿಕ ಸಂಘಗಳು ಸೌಹಾರ್ದ ದಿನಾಚರಣೆಯ ಅಂಗವಾಗಿ ಬಹಿರಂಗ ಸಭೆಯನ್ನು ಮೈಸೂರು ಸಿಲ್ಕ್ ಫ್ಯಾಕ್ಟರಿ ಸರ್ಕಲ್ ಬಳಿ ಆಚರಿಸಿದರು. ರೈಲ್ವೆ ನೌಕರರು ರೇಷ್ಮೆ ಕೆಲಸಗಾರರು, ಮೈಸೂರು ಕಾರ್ಪೊರೇಷನ್ ಕೆಲಸಗಾರರು ಪ್ರಮುಖವಾಗಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ರೈಲ್ವೆ ನೌಕರರ ಮುಖಂಡರಾದ ಕಾಂ. ಜಿ. ವೆಂಕಟೇಶ್‌ರವರು ವಹಿಸಿದ್ದರು. ಕಾಂ. ಎಂ. ಎನ್. ಉಗ್ರಪ್ಪನವರು ಭಾಷಣ ಮಾಡಿ ಯಾವುದೇ ಕಾರ್ಮಿಕರ ಹೋರಾಟಕ್ಕೆ ಎಲ್ಲ ಕಾರ್ಮಿಕರೂ ಸಾರ್ವಜನಿಕರೂ ಬೆಂಬಲ ಕೊಡಬೇಕಾದ ಅವಶ್ಯಕತೆಯನ್ನು ವಿವರಿಸಿದರು. ರಾಜ್ಯದಲ್ಲಿ ಸಿ.ಐ.ಟಿ.ಯು. ವಿನ ಮುಖಂಡತ್ವದಲ್ಲಿ ನಡೆಯುತ್ತಿರುವ ಹೋರಾಟಗಳು ಪರಿಣಾಮಕಾರಿಯಾಗಿ ಕಾರ್ಮಿಕರಲ್ಲಿ ಐಕ್ಯತೆಯನ್ನು ತರುತ್ತಿರುವುದನ್ನು ವಿವರಿಸಿ ತಾ. 14-9-79 ರಂದು ನಡೆಯಲಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಮುಷ್ಕರಕ್ಕೆ ಬೆಂಬಲವನ್ನು ವ್ಯಕ್ತಪಡಿಸಿದರು.

●

ಕೋಲಾರ ಜಿಲ್ಲೆ : ಭೂಗ್ರಹಣ ಚಳುವಳಿ ಆರಂಭಕ್ಕೆ ನಿರ್ಧಾರ

ವ್ಯವಸಾಯಕ್ಕೆ ಯೋಗ್ಯವಾದ ಸರ್ಕಾರಿ ಬಂಜರು ಭೂಮಿ ಮತ್ತು ಅರಣ್ಯ ಭೂಮಿಯನ್ನು ಆಕ್ರಮಣ ಮಾಡಿ ಅದನ್ನು ಭೂಹೀನರಿಗೆ ಮತ್ತು ಬಡರೈತರಿಗೆ ಹಂಚಲು ಕೋಲಾರ ಜಿಲ್ಲಾ ರೈತಸಂಘ ನಿರ್ಧರಿಸಿದೆ.

ಸೆ. 23 ರಂದು ಮಳ್ಳೂರಿನಲ್ಲಿ ಸೇರಿದ್ದ ಜಿಲ್ಲಾ ರೈತಸಂಘದ ಸಭೆಯಲ್ಲಿ ಈ ತಿರ್ಮಾನ ಕೈಗೊಳ್ಳಲಾಯಿತೆಂದು ರೈತಸಂಘದ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣರೆಡ್ಡಿ ತಿಳಿಸಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಕಾಂ. ಜಿ. ಪಾಪಣ್ಣ ವಹಿಸಿದ್ದರು.

ಕೋಲಾರ ಜಿಲ್ಲೆ ಕ್ಷಾಮ ಪೀಡಿತ ಪ್ರದೇಶವೆಂದು ಸರ್ಕಾರ ಒಪ್ಪಿದ್ದರೂ ಹಾಗೆಂದು ಘೋಷಿಸಿಲ್ಲ ಎಂದಿರುವ ರೈತಸಂಘ ಜಿಲ್ಲೆಯ ರೈತರಿಂದ ಬರಬೇಕಾದ ಕಂದಾಯ ಮತ್ತು ಸಾಲದ ಬಾಕಿಯನ್ನು ಮನ್ನಾ ಮಾಡಬೇಕೆಂದು ಒತ್ತಾಯಿಸಿದೆ. ರೈತರು ಉಪಯೋಗಿಸುವ ಪಂಪುಸೆಟ್ಟುಗಳ ಮೇಲಿನ ವಿದ್ಯುತ್ ದರಗಳನ್ನು ಅರ್ಧಕ್ಕೆ ಇಳಿಸಬೇಕೆಂತಲೂ ರೈತಸಂಘ ಚಳುವಳಿ ಹೂಡಲಿದೆ ಎಂದಿರುವ ಪ್ರಕಟಣೆ ಜಿಲ್ಲೆಯ ರೈತರೆಲ್ಲರೂ ಚಳುವಳಿಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದೆ.

ಹರಿಜನ-ಗಿರಿಜನರಿಂದ ಪರಬಾರೆಯಾಗಿರುವ ಜಮೀನನ್ನು ಅವರಿಗೇ ವಾಪಸ್ ಕೊಡಿಸಬೇಕೆಂದೂ ರೈತಸಂಘ ಒತ್ತಾಯಿಸಿದೆ.

●

ಬೆಂಗಳೂರಿನಲ್ಲಿ ಕರೂರು ವೈಶ್ಯಬ್ಯಾಂಕ್ ನೌಕರರ ಸಮ್ಮೇಳನ

ಕರೂರು ವೈಶ್ಯ ಬ್ಯಾಂಕ್ ನೌಕರರ 19ನೇ ಸಮ್ಮೇಳನವು ಬೆಂಗಳೂರು ನಗರದ ಮಿಶನ್ ರಸ್ತೆಯಲ್ಲಿನ ಹಡ್ಸನ್ ಮೆಮೋರಿಯಲ್ ಕ್ರಿಶ್ಚಿಯನ್ ಕಮ್ಯುನಿಟಿ ಹಾಲ್‌ನಲ್ಲಿ ಅಕ್ಟೋಬರ್ 1 ಮತ್ತು 2 ರಂದು ನಡೆಯುವುದು ಎಂದು ನೌಕರರ ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ರಾಜ್ಯದ ಹಣಕಾಸು ಸಚಿವ ಶ್ರೀ ಎಸ್.ಎಂ. ಯಾಹ್ಯಾ ಅವರು ಸಮ್ಮೇಳನವನ್ನು ಅಕ್ಟೋಬರ್ 1 ರಂದು ಬೆಳಿಗ್ಗೆ 10 ಗಂಟೆಗೆ ಉದ್ಘಾಟಿಸಲಿದ್ದು ನೌಕರರ ಸಂಘದ ಅಧ್ಯಕ್ಷ ಕಾಂ. ಎಸ್. ನರಹರಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಸಮ್ಮೇಳನವನ್ನು ಉದ್ದೇಶಿಸಿ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್, ಎ.ಐ.ಟಿ.ಯು.ಸಿ. ಅಧ್ಯಕ್ಷ ಎಂ. ಎಸ್. ಕೃಷ್ಣನ್, ಶಾಸಕ ಮೈಕೇಲ್ ಫರ್ನಾಂಡಿಸ್, ಕೆ.ಪಿ.ಬಿ.ಇ.ಎಫ್. ಅಧ್ಯಕ್ಷ ಆರ್. ಜಗನ್ನಾಥನ್, ಪ್ರಧಾನ ಕಾರ್ಯದರ್ಶಿ ಪಿ ಎಸ್. ಸುಂದರೇಶನ್, ಐ.ಬಿ.ಇ.ಯು. ನ ಪ್ರಧಾನ ಕಾರ್ಯದರ್ಶಿ ಕಾಂ. ಎಚ್. ಡಿ. ನಾಗೇಶ್ ಭಾಷಣ ಮಾಡುತ್ತಾರೆಂದು ಪ್ರಕಟಣೆ ಹೇಳಿದೆ.

●

ಬೀಡಿ ಕೆಲಸಗಾರರ ಸಂಘ : ಕಾರ್ಯಕ್ರಮ ಮುಂದೂಡಿಕೆ

ಬೀಡಿ ಫೆಡರೇಷನ್ ಕೊಟ್ಟಿದ್ದ ಕರೆಯ ಮೇರೆಗೆ ಸೆ. 10 ರಂದು ಮಂಗಳೂರಿನಲ್ಲಿ ಜರುಗಬೇಕಿದ್ದ ಬೀಡಿ ಕೆಲಸಗಾರರ ಕಾರ್ಯಕ್ರಮವನ್ನು ಸೆ. 24 ಕ್ಕೆ ಮುಂದೂಡಲಾಗಿದೆ ಎಂದು ಬೀಡಿ ಕೆಲಸಗಾರರ ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮಂಗಳೂರು ನಗರದಲ್ಲಿ ಜಾರಿಯಲ್ಲಿರುವ 144ನೇ ಸೆಕ್ಷನ್ ಇದಕ್ಕೆ ಕಾರಣವೆಂದು ಪ್ರಕಟಣೆ ಹೇಳಿದೆ.

ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯು ಸೆ. 16 ರಂದು ಮಂಗಳೂರಿನಲ್ಲಿ ಸೇರಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷರಾದ ಕಾಂ. ಉಮಾನಾಥ್ ವಹಿಸಿದ್ದರು. ಸೆ. 24 ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಂಘವು ಕಾರ್ಮಿಕರಿಗೆ ಮನವಿ ಮಾಡಿದೆ.

●

ಅಧಿಕಾರಿಯ ದುರ್ವರ್ತನೆ ವಿರುದ್ಧ ಪ್ರತಿಭಟನೆ

ಬೆಂಗಳೂರಿನ ಟೊರಿನೊ ಕಂಪೆನಿಯಲ್ಲಿ ಮೇಲಧಿಕಾರಿಯಾಗಿರುವ ಜಿ. ಆರ್. ಥಾಂಕಿ ಕರ್ನಾಟಕದ ಜನತೆಯನ್ನು ಹೀಯಾಳಿಸುವ ರೀತಿಯಲ್ಲಿ ಕಾರ್ಮಿಕರನ್ನು ಬೈದುದನ್ನು ಕಾರ್ಮಿಕ ಸಂಘದ ಕಾರ್ಯಕಾರಿ ಸಮಿತಿಯು ಉಗ್ರವಾಗಿ ಖಂಡಿಸಿತು. ಈ ಮೇಲಧಿಕಾರಿಯು ಕ್ಷಮೆ ಕೇಳಬೇಕೆಂದು ಒತ್ತಾಯಿಸಿತು. ಕಂಪೆನಿಯಲ್ಲಿ ದುಡಿಯುವ ಎಲ್ಲಾ 100 ಮಂದಿ ಕಾರ್ಮಿಕರಿಗೂ ಕಾನೂನು ಸವಲತ್ತು ಕೊಡಲು ಸಭೆಯು ಒತ್ತಾಯಿಸಿತು. ತಮ್ಮ ಮೇಲೆ ಆದ ಅವಮಾನವನ್ನು ಪ್ರತಿಭಟಿಸಿ ಹೋರಾಡುವ ಕಾರ್ಮಿಕರ ವಿರುದ್ಧ ಪೋಲೀಸರು ಪ್ರವೇಶಿಸದಂತೆ ಸಭೆಯು ನಿರ್ಣಯ ಕೈಗೊಂಡಿತು.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಆರ್ಥಿಕ ಸಮೀಕ್ಷೆ: [3]

ಸಾಮಾಜಿಕ ಪ್ರಗತಿಯ ಚೇತನ ಶಕ್ತಿಗಳು

—ಆರ್. ಚಂದ್ರ

ಆರ್ಥಿಕ ಅಭಿವೃದ್ಧಿ ಮತ್ತು ಜನಸಂಖ್ಯೆ :

ನಮ್ಮ ದೇಶದಲ್ಲಿ ವಿಪುಲವಾಗಿರುವ ನೆಲ, ಜಲ, ಕಾಡು, ಖನಿಜ, ಮುಂತಾದ ನೈಸರ್ಗಿಕ ಸಂಪನ್ಮೂಲಗಳನ್ನು ಸಾಕಷ್ಟು ಸಂಗ್ರಹಿಸಿ ಜನೋಪಯೋಗಕ್ಕೆ ಬಳಸದೇ ಇರುವುದಕ್ಕೆ ಕಾರಣಗಳೇನು ? ಅಪಾರ ಜನಸಂಪತ್ತಿದ್ದರೂ ಅವರಲ್ಲಿ ಬಡತನ, ದಾರಿದ್ರ್ಯ, ನಿರುದ್ಯೋಗ, ನಿರಕ್ಷರತೆ, ಅನಾರೋಗ್ಯ ಮುಂತಾದ ದುಃಸ್ಥಿತಿಗಳು ಹಾಸುಹೊಕ್ಕಿರಲು ಕಾರಣಗಳೇನು ? ಮುಖ್ಯವಾಗಿ ಸರ್ವತೋಮುಖವಾದ ಆರ್ಥಿಕ ಅಭಿವೃದ್ಧಿಯು ಸಾಕಷ್ಟು ಆಗದೆ ಇರುವುದು ಇವುಗಳಿಗೆಲ್ಲಾ ಕಾರಣ ಎಂದು ಸ್ಥೂಲವಾಗಿ ಎಲ್ಲರೂ ಒಪ್ಪಬಹುದು. ಆದರೆ, ಆರ್ಥಿಕ ಅಭಿವೃದ್ಧಿಯು ಹಿಂದುಳಿಯಲು ಕಾರಣವೇನು ? ಹೆಚ್ಚುತ್ತಿರುವ ಜನಸಂಖ್ಯೆ ಎಂದು ಥಟ್ಟನೆ ಉತ್ತರಿಸುವವರಿದ್ದಾರೆ. ಜನರ ಐಹಿಕಾಭ್ಯುದಯಕ್ಕಾಗಿಯೇ ಆರ್ಥಿಕ ಪ್ರಗತಿಯನ್ನು ಸಾಧಿಸಬೇಕಾಗಿರುವಾಗ, ಈಗ ಅವರ ಸಂಖ್ಯೆಯೇ ಹೆಚ್ಚಾಯಿತು ಎಂಬ ವಾದ, ಕೈಸಾಗದ ಹೊಣೆಗೇಡಿಗಳು ಮುಂದೊಡ್ಡುವ ಒಂದು ನೆಪಮಾತ್ರ. ಭಾರತದಂತಹ ಜನನಿಬಿಡ ದೇಶಗಳಲ್ಲಿ ಆರ್ಥಿಕ ಅಭಿವೃದ್ಧಿಯು ಹಿಂದುಳಿದಿರುವಂತೆಯೇ, ಅತ್ಯಂತ ಜನ ವಿರಳವಾಗಿರುವ ಮತ್ತು ನೈಸರ್ಗಿಕ ಸಂಪತ್‌ಭರಿತವಾಗಿರುವ ಅರಬ್ ಮತ್ತು ಆಫ್ರಿಕಾ ದೇಶಗಳಲ್ಲೂ ಆರ್ಥಿಕ ಅಭಿವೃದ್ಧಿಯು ಭಾರತಕ್ಕಿಂತಲೂ ಹಿಂದುಳಿದಿದೆ. ಭಾರತಕ್ಕಿಂತಲೂ ಹೆಚ್ಚು ಜನನಿಬಿಡವಾಗಿರುವ ಕೆಲವು ಐರೋಪ್ಯ ದೇಶಗಳಲ್ಲಿಯೂ, ಚೀನಾ ಮತ್ತು ಜಪಾನು ದೇಶಗಳಲ್ಲಿಯೂ ಆರ್ಥಿಕ ಅಭಿವೃದ್ಧಿಯು ಬಹಳ ಮುಂದುವರಿದಿದೆ. ಅತ್ಯಂತ ಅಭಿವೃದ್ಧಿ ಹೊಂದಿದ ಕೆಲವು ಐರೋಪ್ಯ ದೇಶಗಳಲ್ಲಿ ಸಾಕಷ್ಟು ಜನಸಂಖ್ಯೆ ಇಲ್ಲದೆ, ಉತ್ಪಾದಿತ ವಸ್ತುಗಳಿಗೆ ಆಂತರಿಕ ಮಾರುಕಟ್ಟೆಗಳಿಲ್ಲದೆ, ಆರ್ಥಿಕ ಅಭಿವೃದ್ಧಿಯು ಸ್ಥಗಿತವಾಗುತ್ತಿದೆ. ಅನೇಕ ಸಮಾಜ ವಿಜ್ಞಾನಿಗಳ ಅಭಿಪ್ರಾಯದಂತೆ, ಹೆಚ್ಚುತ್ತಿರುವ ಜನಸಂಖ್ಯೆಯು ಆರ್ಥಿಕ ಅಭಿವೃದ್ಧಿಯ ಹಿಂದುಳಿಯುವಿಕೆಯ ದುಷ್ಪರಿಣಾಮವೇ ಹೊರತು, ಅದರ ಕಾರಣವಲ್ಲ. ಅರ್ಥಾತ್, ಯೋಜನಾಬದ್ಧವಾದ ಜನಸಂಖ್ಯಾ ನಿಯಂತ್ರಣದ ಯಶಸ್ಸೂ ಅಂತಿಮವಾಗಿ ಜನರ ಜೀವನ ಮಟ್ಟವನ್ನೇ, ಆರ್ಥಿಕ ಅಭಿವೃದ್ಧಿಯನ್ನೇ ಅವಲಂಬಿಸಿರುವುದು. ಅಷ್ಟೇ ಅಲ್ಲದೆ, ಆರ್ಥಿಕವಾಗಿ ಅತ್ಯಂತ ಮುಂದುವರಿದ ಪಶ್ಚಿಮ ಯುರೋಪಿನ ರಾಷ್ಟ್ರಗಳೂ ಅಮೇರಿಕಾ ಸಂಯುಕ್ತ ಸಂಸ್ಥಾನ, ಕೆನಡಾ, ಜಪಾನ್, ಆಸ್ಟ್ರೇಲಿಯಾ ದೇಶಗಳೂ ಇಂದು ನಿರುದ್ಯೋಗ, ಹಣದುಬ್ಬರ, ನಿರಕ್ಷರತೆ, ನೈತಿಕ ಅಧಃಪತನ, ಸಾಮಾಜಿಕ ಅಪರಾಧ, ಘರ್ಷಣೆ, ಅಭದ್ರತೆ ಮುಂತಾದ ಭೀಕರ ಸಮಸ್ಯೆಗಳನ್ನು ಎದುರಿಸುತ್ತಿವೆ.

ಆದರೆ, ಒಂದನೇ ಜಾಗತಿಕ ಯುದ್ಧಾನಂತರ ಅಸ್ತಿತ್ವಕ್ಕೆ ಬಂದ ಸೋವಿಯತ್ ರಷ್ಯಾ, ಕೇವಲ ಅರವತ್ತು ವರುಷಗಳಲ್ಲಿಯೇ ಅತ್ಯದ್ಭುತವಾಗಿ ಸರ್ವತೋಮುಖವಾದ ಸಾಮಾಜಿಕ ಪ್ರಗತಿಯನ್ನು ಸಾಧಿಸಿದೆ. ಎರಡು ಶತಮಾನಗಳಿಂದ ಕೈಗಾರಿಕೆಗಳಲ್ಲಿ ಅತ್ಯಂತ ಮುಂದುವರಿದ ಮತ್ತು ಜಗತ್ತಿನಾದ್ಯಂತ ತಮ್ಮ ಸಾಮ್ರಾಜ್ಯಗಳನ್ನು ಸ್ಥಾಪಿಸಿದ ಐರೋಪ್ಯ ರಾಷ್ಟ್ರಗಳನ್ನೂ, ಅಮೇರಿಕಾ ಸಂಯುಕ್ತ ಸಂಸ್ಥಾನವನ್ನೂ ಜಪಾನು ದೇಶವನ್ನೂ ಇಂದು ಸೋವಿಯತ್ ರಷ್ಯ ಹಿಮ್ಮೆಟ್ಟಿಸಿದೆ. ಎರಡನೇ ಜಾಗತಿಕ ಯುದ್ಧಾನಂತರ ಸ್ವಾತಂತ್ರ್ಯಗಳಿಸಿ ಹೊಸ ಅಸ್ತಿತ್ವಕ್ಕೆ ಬಂದ ಚೀನಾ ಗಣರಾಜ್ಯ, ಪೂರ್ವ ಯೂರೋಪಿನ ರಾಷ್ಟ್ರಗಳು, ಕೊರಿಯಾ, ವಿಯಟ್ನಾಂ, ಕ್ಯೂಬಾ ಮುಂತಾದ ರಾಷ್ಟ್ರಗಳೂ ಅಸಮಾನತೆ, ನಿರುದ್ಯೋಗ, ಅನಕ್ಷರತೆ, ಬಡತನ, ಬೆಲೆಏರಿಕೆ, ಅನಾರೋಗ್ಯ, ಸಾಮಾಜಿಕ ಘರ್ಷಣೆ ಹಾಗೂ ಅಭದ್ರತೆ, ವಿದೇಶಿ ಆಕ್ರಮಣ ಮುಂತಾದ ಗಂಭೀರ ಸಮಸ್ಯೆಗಳನ್ನು ಯಶಸ್ವಿಯಾಗಿ ಹೋಗಲಾಡಿಸುತ್ತಿವೆ.

ಜನರ ಉತ್ಪಾದನಾ ಶಕ್ತಿಗಳು :

ಪ್ರಪಂಚದ ಜನಸಂಖ್ಯೆಯು ಹೆಚ್ಚುತ್ತಲೇ ಇದೆ. ಮಾನವನ ಇತಿಹಾಸದ ಮೊದಲ 80 ವರುಷಗಳಲ್ಲಿ, ಅಂದರೆ 1850 ರಷ್ಟರಲ್ಲಿ, ಜನಸಂಖ್ಯೆಯು 1000 ಮಿಲಿಯಕ್ಕೆ ಮುಟ್ಟಿತು. ಮುಂದಿನ 75 ವರುಷಗಳಲ್ಲಿಯೇ, ಅಂದರೆ 1925 ರಲ್ಲಿ ಜನಸಂಖ್ಯೆಯು 2000 ಮಿಲಿಯಕ್ಕೇರಿತು. ನಂತರದ 37 ವರುಷಗಳಲ್ಲಿ, ಅಂದರೆ 1962 ರಲ್ಲಿ, 3000 ಮಿಲಿಯಕ್ಕೂ ಮೀರಿತು. ಆ ಮೇಲಿನ ಕೇವಲ 13 ವರುಷಗಳಲ್ಲಿ, ಅಂದರೆ 1975 ರಲ್ಲಿ, 4000 ಮಿಲಿಯಕ್ಕೆ ತಲುಪಿತು ಮುಂದಿನ 7 ವರುಷಗಳಲ್ಲಿ, ಅಂದರೆ 1982 ರಷ್ಟರಲ್ಲಿ, ಪ್ರಪಂಚದ ಜನಸಂಖ್ಯೆಯು 5000 ಮಿಲಿಯಕ್ಕೆ ಮುಟ್ಟಿ ಈ ಶತಮಾನದ ಅಂತ್ಯದಲ್ಲಿ 7000 ಮಿಲಿಯಕ್ಕೂ ಮೀರುವುದೆಂದು 1973 ರಲ್ಲಿ ನಡೆಸಿದ ವಿಶ್ವಸಂಸ್ಥೆಯ ಒಂದು ಅಧ್ಯಯನದಿಂದ ತಿಳಿದು ಬಂದಿದೆ. ಭಾರತದ ಜನಸಂಖ್ಯೆಯೂ ಈ ಶತಮಾನದ ಆದಿಯಲ್ಲಿ 238 ಮಿಲಿಯವಿದ್ದುದು, 1951ರಲ್ಲಿ 361 ಮಿಲಿಯಕ್ಕೆ ಮುಟ್ಟಿ, 1975 ರಷ್ಟರಲ್ಲಿ 600ಮಿಲಿಯಕ್ಕೂ ಮೀರಿತು. ಈ ಶತಮಾನದ ಅಂತ್ಯಕ್ಕೆ ಭಾರತದ ಜನಸಂಖ್ಯೆಯು 1000 ಮಿಲಿಯಕ್ಕೇರುವುದೆಂದು ಅಂದಾಜು ಮಾಡಲಾಗಿದೆ. ಆದರೆ, ಈ ಅವಧಿಯಲ್ಲಿ ಮಾನವನ ಉತ್ಪಾದನಾ ಸಾಮರ್ಥ್ಯವೂ ಹೆಚ್ಚುತ್ತಲೇ ಬಂದಿರುವುದನ್ನು ಗಮನಿಸಬೇಕು. ಅವನು ಹುಟ್ಟುವಾಗ ಹೊಟ್ಟೆ, ಬಾಯಿ ಮಾತ್ರ ಪಡೆದು ಬಾರದೆ, ಕೈಕಾಲುಗಳನ್ನೂ ಬುದ್ಧಿ ವಿವೇಚನೆಯನ್ನೂ ಪಡೆದು ಬರುವನು. ಅಂತೆಯೇ, ಅವನ ದುಡಿಮೆಯ ಫಲವು ಅವನಿಗೂ, ಅವನ ಕುಟುಂಬಕ್ಕೂ, ಸಮಾಜಕ್ಕೂ ಸಾಕಾಗಿ, ಮುಂದಿನ ಪೀಳಿಗೆಗಳಿಗೂ ಮಿಗುವುದೆಂದು ಸಮಾಜ ವಿಕಾಸದ ಇತಿಹಾಸದಿಂದ ಸ್ಪಷ್ಟವಾಗುವುದು. ಚತುಷ್ಪಾದಿ ಕಪಿಮಾನವನು ದ್ವಿಪಾದಿ ಮಾನವನಾಗಿ ತನ್ನೆರಡು ಕೈಗಳನ್ನು ಮೊದಲ ಉಪಕರಣಗಳನ್ನಾಗಿ ಮಾಡಿಕೊಂಡುದುದು; ಆದಿ ಮಾನವನ ಬೇಟೆಜೀವನದ ಒರಟು ಕಲ್ಲು ಆಯುಧಗಳು, ಬಿಲ್ಲು ಬಾಣಗಳು; ಪಶು ಸಂಗೋಪನ ಮತ್ತು ಪ್ರಾಚೀನ ವ್ಯವಸಾಯ ಜೀವನದ ಕತ್ತಿ, ಕೊಡಲಿ, ನೇಗಿಲು ಮುಂತಾದ ಮರದ ಮತ್ತು ಕಬ್ಬಿಣದ ಉಪಕರಣಗಳು, ಕಲಾಕುಶಲತೆಗಳು; ಯಂತ್ರಗಳ ಬಳಕೆ, ಸಾರಿಗೆ ಸಂಪರ್ಕಗಳಲ್ಲಿ ಪ್ರಗತಿ, ಕೃಷಿ ಕೈಗಾರಿಕೆಗಳ ಪ್ರತ್ಯೇಕತೆ, ಬೃಹತ್ ಪ್ರಮಾಣದ ಉತ್ಪಾದನೆ, ದೇಶ ವಿದೇಶಗಳೊಳಗಿನ ವ್ಯಾಪಾರ ವಾಣಿಜ್ಯ; ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ವಿಶೇಷ ಸಾಧನೆ: ಇವೆಲ್ಲವೂ ಜನಕೋಟಿಯ ಐಹಿಕಾಭ್ಯುದಯಗಳನ್ನು ಪೂರೈಸುವ ಉತ್ಪಾದನಾ ಶಕ್ತಿಗಳು (productive forces) ಇವುಗಳ ಅಭಿವೃದ್ಧಿಯ ಇತಿಹಾಸವು ಅದ್ಭುತವಾಗಿದೆ.

ಇಂದು ಮಾನವನ ವಿಜ್ಞಾನ ಮತ್ತು ತಂತ್ರಜ್ಞಾನಗಳ ಮುನ್ನಡೆಯಿಂದಾಗಿ, ಭೂಗರ್ಭದಿಂದ ಜಲ, ತೈಲ, ಖನಿಜ ಸಂಪತ್ತುಗಳನ್ನು ಪಡೆಯಬಹುದು. ಮರುಭೂಮಿಯನ್ನು ಫಲವತ್ತಾಗಿಸಬಹುದು. ಸಮುದ್ರದ ಆಳದಿಂದ ಅತ್ಯಮೂಲ್ಯ ಕೈಗಾರಿಕಾ ಕಚ್ಚಾ ಪದಾರ್ಥಗಳನ್ನೂ, ಆಹಾರ ಸಾಮಗ್ರಿಗಳನ್ನೂ ಪಡೆಯಬಹುದು. ದಕ್ಷಿಣ ಮತ್ತು ಉತ್ತರ ಧ್ರುವ ಸಮುದ್ರಗಳಿಂದ ಹಿಮಗಡ್ಡೆಗಳನ್ನು ಆಫ್ರಿಕಾ ದೇಶಗಳಿಗೆ ಸಾಗಿಸಿ ಕರಗಿಸಿ ನೀರು ಸರಬರಾಜು ಮಾಡಬಹುದು. ಜಲ, ತೈಲ, ಕಲ್ಲಿದ್ದಲು, ಪರಮಾಣು, ಸೌರ ಮುಂತಾದ ಮೂಲಗಳಿಂದಲೂ, ಸಸ್ಯ ಪಶು ಮಾನವ ಇವುಗಳ ನೈಸರ್ಗಿಕ ವಿಸರ್ಜನೆಗಳಿಂದಲೂ ಶಕ್ತಿ ಸಂಚಯಿಸಬಹುದು. ಬಹುರಾಷ್ಟ್ರೀಯ ನದಿ ಸರೋವರಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ವಿದ್ಯುತ್, ನೀರಾವರಿ ಸೌಕರ್ಯಗಳನ್ನು ಪಡೆಯಬಹುದು ಮತ್ತು ನೆರೆ ಬರಗಾಲಗಳಂತಹ ಅನಾಹುತಗಳನ್ನು ನಿಯಂತ್ರಿಸಬಹುದು. ಭಾರತದಲ್ಲಿಯೇ ಗಂಗಾನದಿಯನ್ನು ಕಾವೇರಿ ನದಿಗೆ ಸೇರಿಸುವ 'ಗಾರ್ಲೆಂಟ್' ಯೋಜನೆಯೂ ತಾಂತ್ರಿಕವಾಗಿ ಸಾಧ್ಯವಿದೆ. ಪಶ್ಚಿಮ ಘಟ್ಟಗಳಲ್ಲಿ ಬೀಳುವ ಮಳೆನೀರನ್ನು ಅವುಗಳ ಕಂದರಗಳಲ್ಲಿ, ತಪ್ಪಲುಗಳಲ್ಲಿ ಸಂಗ್ರಹಿಸಿಟ್ಟು, ಪರ್ವತಗಳ ಇಬ್ಬದಿಗಳಲ್ಲಿ ಹರಡಿರುವ ವಿಸ್ತಾರ ಭೂಮಿಯನ್ನು ಹಸನುಗೊಳಿಸಬಹುದು. ಕೃತಕ ಮಳೆ ಬರಿಸಿ ಬರಗಾಲ ನಿವಾರಿಸಬಹುದು. ಬಾಹ್ಯಾಕಾಶ ಉಪಗ್ರಹಗಳಿಂದ ದೇಶವಿದೇಶಗಳಲ್ಲಿ ಸಂಪರ್ಕ ಸಾಧನಗಳನ್ನು ಏರ್ಪಡಿಸಬಹುದು ಮತ್ತು ಶಿಕ್ಷಣ ಸೌಕರ್ಯಗಳನ್ನು ಹೆಚ್ಚಿಸಬಹುದು. ಮಾನವರೆಲ್ಲಾ ಶತಾಯುಷಿಗಳಾಗಿ ಬಾಳುವಂತಾಗಲು ಆರೋಗ್ಯ ಮತ್ತು ವೈದ್ಯಕೀಯ ವಿಜ್ಞಾನಗಳಲ್ಲಿ ಗಣನೀಯವಾದ ಪ್ರಗತಿಯಾಗಿದೆ. ಕೃಷಿ ಮತ್ತು ಕೈಗಾರಿಕೆಗಳಲ್ಲಿ ನಡೆದ ಅಧಿಕ ಉತ್ಪಾದನೆಯ ಮಹತ್ಸಾಧನೆಗಳಿಂದಾಗಿ, ಜಗತ್ತಿನ ಈಗಿನ ಜನಸಂಖ್ಯೆಯ ಎರಡು ಮೂರು ಪಾಲು ಹೆಚ್ಚು ಜನರು ಸುಖ ಸಮೃದ್ಧಿಯಲ್ಲಿರಬಹುದು. ವಿಜ್ಞಾನ ಮತ್ತು ತಂತ್ರಜ್ಞಾನಗಳು ಅತ್ಯಂತ ಮುಂದುವರಿದ ಸಮಕಾಲೀನ ಪರಿಸ್ಥಿತಿಯಲ್ಲಿ ಜನಸಂಖ್ಯೆಯ ಹೆಚ್ಚಳದ ವಾದವು ಮಾನವನ ಅದ್ಭುತ ಸಾಧನೆಗೇ ಅಪಮಾನ!

ಜನರ ಉತ್ಪಾದನಾ ಸಂಬಂಧಗಳು:

ಹಾಗಾದರೆ, ಆರ್ಥಿಕ ಅಭಿವೃದ್ಧಿಯು ಹಿಂದುಳಿಯಲು ಬೇರಾವ ಕಾರಣಗಳಿವೆ ? ಭೌತಿಕ ಜೀವನಾವಶ್ಯಕ ವಸ್ತುಗಳನ್ನು ಪಡೆಯಲು ಜನರು ನಿರಂತರವಾಗಿ ಪ್ರಕೃತಿಯೊಂದಿಗೆ ಹೋರಾಡುತ್ತಿರುವರು. ಅವರು ಈ ಹೋರಾಟವನ್ನು ಒಬೊಬ್ಬರಾಗಿಯೇ ನಡೆಸುವುದಿಲ್ಲ. ಸಾಮುದಾಯಕವಾಗಿ, ಸಾಮಾಜಿಕ ಘಟಕಗಳಾಗಿ ಪರಸ್ಪರ ಸಹಕಾರದಿಂದ ನಡೆಸುವರು. ಹೀಗಾಗಿ, ಉತ್ಪಾದನೆಯು ಎಲ್ಲ ಕಾಲಪರಿಸ್ಥಿತಿಗಳಲ್ಲಿಯೂ ಸಾಮಾಜಿಕ ಕ್ರಮ ಆಗಿರುವುದು. ಈ ಮೊದಲೇ ತಿಳಿಸಿದಂತೆ, ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸುವವರೇ ತಮ್ಮ ಶ್ರಮ ಭಾರವನ್ನು ಇಳಿಸಲು ಮತ್ತು ಐಹಿಕಾಭ್ಯುದಯಗಳನ್ನು ಹೆಚ್ಚಿಸಲು, ಉತ್ಪಾದನಾ ಶಕ್ತಿಗಳನ್ನು ತಮ್ಮ ಅನುಭವದ ನೈಪುಣ್ಯಗಳಿಂದ ನಿರಂತರವಾಗಿ ಸೃಷ್ಟಿಸುತ್ತಿರುವರು ಮತ್ತು ಅವುಗಳಲ್ಲಿ ಬದಲಾವಣೆಗಳನ್ನೂ ಸುಧಾರಣೆಗಳನ್ನೂ ಮಾಡುತ್ತಿರುವರು. ಕಾರ್ಲ್‌ಮಾರ್ಕ್ಸ್ ತಿಳಿಸುವಂತೆ, ಜನರು ಉತ್ಪಾದನೆಯ ಎಲ್ಲಾ ಹಂತಗಳಲ್ಲಿ ಪ್ರಕೃತಿಯೊಂದಿಗೆ ಸಂಬಂಧ ಹೊಂದಿರುವುದಲ್ಲದೆ, ಪರಸ್ಪರರೊಳಗೂ ಸ್ಪಷ್ಟ ಸಂಪರ್ಕ ಮತ್ತು ಸಂಬಂಧಗಳನ್ನು ಹೊಂದಿರುವರು. ಜನರ ನಿಶ್ಚಿತ ಸಾಮಾಜಿಕ ಸಂಪರ್ಕ ಮತ್ತು ಸಂಬಂಧಗಳ ಮೂಲಕವೇ ಜೀವನಕ್ಕಾಗಿ ನಿಸರ್ಗದೊಡನೆ ನಿರಂತರ ಹೋರಾಟ ನಡೆಯುವುದು, ಉತ್ಪಾದನಾ ಕ್ರಿಯೆಗಳು ನಡೆಯುವುವು.

ಜನರು ತಮ್ಮ ಜೀವನಾವಶ್ಯಕ ಭೌತಿಕ ವಸ್ತುಗಳನ್ನು ಯಾವ ಸಾಧನ ಸಲಕರಣೆಗಳಿಂದ ಉತ್ಪಾದಿಸುವರು ಎಂಬ ಪ್ರಶ್ನೆಯನ್ನು ಜನರ ಉತ್ಪಾದನಾ ಶಕ್ತಿಗಳು ಉತ್ತರಿಸುವುವು. ಹಾಗೆಯೇ ನೆಲ, ಜಲ, ಕಾಡು, ಖನಿಜ ಮುಂತಾದ ನೈಸರ್ಗಿಕ ಸಂಪತ್ತುಗಳನ್ನು, ಕಚ್ಚಾ ಪದಾರ್ಥಗಳನ್ನು, ಉತ್ಪಾದನಾ ಸಾಧನ ಸಲಕರಣೆಗಳಾದ ಯಂತ್ರೋಪಕರಣಗಳನ್ನು, ಕಾರ್ಖಾನೆಗಳಂತಹ ಉತ್ಪಾದನಾ ಕಟ್ಟಡಗಳನ್ನು ಸಾರಿಗೆ ಸಂಪರ್ಕ ಸಾಧನಗಳನ್ನು- ಒಟ್ಟಿನಲ್ಲಿ ಉತ್ಪಾದನಾ ಮಾಧ್ಯಮಗಳನ್ನು (Means of production) ಯಾರು ಸ್ವಾಧೀನಪಡಿಸಿಕೊಂಡಿರುವರು ಎಂಬ ಪ್ರಶ್ನೆಯನ್ನು ಜನರ ಉತ್ಪಾದನಾ ಸಂಬಂಧಗಳು (Production relations) ಉತ್ತರಿಸುವುವು. ಉತ್ಪಾದನಾ ಮಾಧ್ಯಮಗಳು ಸಮಸ್ತ ಸಮಾಜದ ಸ್ವಾಧೀನದಲ್ಲಿರಬಹುದು, ಕೆಲವೇ ವ್ಯಕ್ತಿಗಳ, ಗುಂಪುಗಳ ಅಥವಾ ವರ್ಗಗಳ ಸ್ವಾಧೀನದಲ್ಲಿರಬಹುದು. ಹಾಗೆಯೇ ಅವುಗಳನ್ನು ಸಮಸ್ತ ಸಮಾಜದ ಶ್ರೇಯೋಭಿವೃದ್ಧಿಗಾಗಿ ಬಳಸಬಹುದು ಅಥವಾ ಕೆಲವೇ ಜನರ ಸ್ವಾರ್ಥ ಸಾಧನೆಗಳಿಗಾಗಿ ಮತ್ತು ಇತರ ವ್ಯಕ್ತಿಗಳ, ಗುಂಪುಗಳ, ವರ್ಗಗಳ ಶೋಷಣೆಗಾಗಿ ಬಳಸಬಹುದು. ಆದುದರಿಂದ ಉತ್ಪಾದನಾ ಸಂಬಂಧಗಳು ಪರಸ್ಪರ ಸಹಾಯ ಸಹಕಾರಿ ಮಾದರಿಯಾಗಿದ್ದು ಶೋಷಣಾರಹಿತವಾಗಿರಬಹುದು; ಪರಸ್ಪರ ಪೈಪೋಟಿಯ, ಮೇಲು-ಕೀಳು, ಒಡೆಯ-ಆಳು ಎಂಬ ತಾರತಮ್ಯವಿರುವ ಅಸಮಾನತೆಯ ಮತ್ತು ಶೋಷಣೆಯ ಮಾದರಿಯಾಗಿರಬಹುದು. ಜನರ ಉತ್ಪಾದನಾ ಶಕ್ತಿಗಳಿಗೂ, ಉತ್ಪಾದನಾ ಸಂಬಂಧಗಳಿಗೂ ಪರಸ್ಪರ ಹೊಂದಾಣಿಕೆ, ಸಾಮರಸ್ಯ, ಐಕ್ಯಮತ್ಯ ಇದ್ದಾಗ ಮಾತ್ರ ಜನರ ಐಹಿಕಾಭ್ಯುದಯಗಳನ್ನು ಅತ್ಯುತ್ತಮವಾಗಿ ಪೂರೈಸಬಹುದಾದ ಸರ್ವತೋಮುಖವಾದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದು. ಜನರ ಉತ್ಪಾದನಾಶಕ್ತಿಗಳಿಗನುಗುಣವಾಗಿ ಉತ್ಪಾದನಾ ಸಂಬಂಧಗಳಿಲ್ಲದಿರುವಾಗ, ಸಾಮಾಜಿಕ ವೈರುಧ್ಯಗಳಿಂದಾಗಿ ಉತ್ಪಾದನಾಶಕ್ತಿಗಳು ವ್ಯರ್ಥವಾಗುವುವು ಮತ್ತು ಕ್ಷಯಿಸುವುವು. ಪರಿಣಾಮವಾಗಿ, ಆರ್ಥಿಕ ಅಭಿವೃದ್ಧಿಯು ಹಿಂದುಳಿಯುವುದು. ಆದುದರಿಂದ, ಆರ್ಥಿಕ ಅಭಿವೃದ್ಧಿಗೆ ಜನಸಂಖ್ಯೆಗಿಂತಲೂ ಜನರ ಉತ್ಪಾದನಾ ಶಕ್ತಿಗಳಿಗನುಗುಣವಾಗಿ ಅವರೊಳಗಿನ ಉತ್ಪಾದನಾ ಸಂಬಂಧಗಳಿರುವುದೇ ಹೆಚ್ಚು ಪ್ರಾಮುಖ್ಯವಾಗಿದೆ.

ಜನರ ಜೀವನ ವಿಧಾನಗಳು :

ಜನರ ಉತ್ಪಾದನಾ ಶಕ್ತಿಗಳು ಮತ್ತು ಅವರೊಳಗಿನ ಉತ್ಪಾದನಾ ಸಂಬಂಧಗಳು ಒಂದು ಸಮಾಜದ

[7ನೇ ಪುಟ ನೋಡಿ]

ಎರಡು ಎ. ಐ. ಸಿ. ಸಿ. ಅಧಿವೇಶನಗಳ ಭಿನ್ನ ಭಿನ್ನ ನಿಲುವುಗಳು..........

ಇಂದಿರಾ ಕಾಂಗ್ರೆಸ್: ಮರಳಿ ತುರ್ತುಪರಿಸ್ಥಿತಿಗೆ

ರಾಷ್ಟ್ರೀಯ ಕಾಂಗ್ರೆಸ್: ಜನತಂತ್ರದ ಕಡೆಗೆ

ಕಾಂಗ್ರೆಸ್ (ಐ) ಪಕ್ಷವಾಗಲಿ ಅವರ ಅಧ್ಯಕ್ಷೆಯಾಗಲಿ ಬದಲಾಗಿದ್ದಾರೆ ಎನ್ನುವ ಭ್ರಮೆ ಯಾರಿಗೂ ಇರಬೇಕಿಲ್ಲ. ಈ ಪಕ್ಷವೇನಾದರೂ ಲೋಕಸಭೆಯಲ್ಲಿ ಸ್ಪಷ್ಟ ಬಹುಮತ ಪಡೆದುಕೊಂಡೋ, ಇಲ್ಲವೇ ಇತರ ಪಕ್ಷಗಳೊಂದಿಗೆ ಇರಿಸುಮುರಿಸಿನ ಹೊಂದಾಣಿಕೆ ಮಾಡಿಕೊಂಡೋ ಸರ್ಕಾರ ರಚಿಸಿದರೆ ತುರ್ತುಪರಿಸ್ಥಿತಿಯ ಕರಾಳದಿನಗಳಲ್ಲಾದ ದಾರುಣ ಕೃತ್ಯಗಳೆಲ್ಲ ಪುನರಾವರ್ತನೆಗೊಳ್ಳುತ್ತವೆ ಎಂಬುದಕ್ಕೆ ಈಗಾಗಲೇ ಸ್ಪಷ್ಟ ಸೂಚನೆಗಳು ಕಂಡುಬರುತ್ತಿವೆ.

ಕಳೆದ ಗುರುವಾರ ಎ. ಐ. ಸಿ. ಸಿ. (ಐ) ತೆಗೆದುಕೊಂಡ ನಿರ್ಣಯದಲ್ಲಿ ಹೀಗೆ ಹೇಳಲಾಗಿದೆ;

"ಬರೀ ಕಾರ್ಯನಿರ್ವಹಣೆಯಲ್ಲ, ಸಮಾಜ ಪರಿವರ್ತನೆಗೆ ಕ್ರಾಂತಿಕಾರಕ ಪ್ರಯತ್ನಗಳನ್ನು ಮಾಡುವುದು ತನ್ನ ರಾಜಕೀಯ ಕೆಲಸ ಎಂದು ಕಾಂಗ್ರೆಸ್ ಭಾವಿಸುತ್ತದೆ. ಈಗಾಗಲೇ ಬಹಳಷ್ಟು ನಡೆದಿರುವ ಈ ಪರಿವರ್ತನೆ ಕ್ರಿಯೆಯನ್ನು ಮಧ್ಯದಲ್ಲಿ ಬಂದ ಜನತಾ ಅಂಕ ವಿರಾಮದ ನಂತರ ಮುಂದುವರಿಸಬೇಕಾಗಿದೆ."

ಇದನ್ನು ಬೇರೆ ಮಾತುಗಳಲ್ಲಿ ಹೇಳುವುದಾದರೆ, 1977 ಮಾರ್ಚ್‌ನಲ್ಲಿ ಮತದಾರರು ಕೊಟ್ಟ ತೀರ್ಪನ್ನು ಬದಲಿಸಬೇಕು ಎಂದು ಕಾಂಗ್ರೆಸ್ (ಐ) ಕರೆ ಕೊಡುತ್ತಿದೆ. ಎರಡೂವರೆ ವರ್ಷಗಳ ಹಿಂದೆ ಜನತೆ ಹೊರಗಟ್ಟಿದ್ದ ಸರ್ವಾಧಿಕಾರಿ ದುಷ್ಟಕೂಟವೇ ಮರಳಿ ಬರಬೇಕೆಂಬುದು ಅವರ ಇಂಗಿತವಾಗಿದೆ.

ಗಮನಿಸತಕ್ಕ ವ್ಯತ್ಯಾಸ :

ಕಳೆದ ಬುಧವಾರ ಮತ್ತು ಗುರುವಾರ ಬೆಂಗಳೂರಿನಲ್ಲಿ ನಡೆದ ಇನ್ನೊಂದು ಕಾಂಗ್ರೆಸ್ಸಿನ ಎ. ಐ. ಸಿ. ಸಿ. ಅಧಿವೇಶನ ಮತ್ತು ನವದೆಹಲಿಯಲ್ಲಿ ನಡೆದ ಎ. ಐ. ಸಿ. ಸಿ. (ಐ) ಅಧಿವೇಶನದ ನಡುವಿನ ವ್ಯತ್ಯಾಸ ಗಮನಿಸತಕ್ಕದ್ದು. ಸುಮಾರು ಮುವತ್ತು ವರ್ಷ ದೇಶವನ್ನಾಳಿದ ಕಾಂಗ್ರೆಸ್ಸಿನ ಅಂಗಗಳಾದ ಈ ಎರಡೂ ಪಕ್ಷಗಳಿಗೆ ಒಂದು ಶತಮಾನದ ಕಾಂಗ್ರೆಸ್ ಪರಂಪರೆಯ ಬಗೆಗೆ ಹೆಮ್ಮೆಯಿದೆ. ಆದರೆ ಬೆಂಗಳೂರಿನಲ್ಲಿ ನಡೆದ ಎ. ಐ. ಸಿ. ಸಿ. ಅಧಿವೇಶನ, "ನೆಹರೂ ಅವರ ಕಾಲದ ಕಾಂಗ್ರೆಸ್ ಆಡಳಿತ ಮತ್ತು ನಂತರದ ಆಡಳಿತ" ಎಂದು ವ್ಯತ್ಯಾಸ ಮಾಡುತ್ತದೆ. ನೆಹರೂ ನಂತರದ ಆಡಳಿತದ ಬಗೆಗೆ ಬೆಂಗಳೂರು ಎ. ಐ. ಸಿ. ಸಿ. ಹೀಗೆ ಹೇಳುತ್ತದೆ:

"ದೇಶದಲ್ಲಿ ನಡೆದ ಘಟನೆಗಳು 1975 ರಲ್ಲಿ ಆಂತರಿಕ ತುರ್ತುಪರಿಸ್ಥಿತಿಗೆ ಕಾರಣವಾದುದು ಅತ್ಯಂತ ದುರದೃಷ್ಟಕರ. ತುರ್ತುಪರಿಸ್ಥಿತಿಯಲ್ಲಾದ ಸರ್ಕಾರಿ ಅಧಿಕಾರದ ದುರುಪಯೋಗ ಜನರನ್ನು ನಮ್ಮಿಂದ ದೂರಮಾಡಿತು. ಮುಖ್ಯವಾಗಿ, ಉತ್ತರದ ರಾಜ್ಯಗಳಲ್ಲಿ. ಇದರಿಂದಾಗಿ 1977ರ ಮಹಾಚುನಾವಣೆಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಈ ಪ್ರದೇಶದಲ್ಲಿ ಸಂಪೂರ್ಣವಾಗಿ ಸೋಲುವಂತಾಯಿತು. ಕೇಂದ್ರದಲ್ಲಿ ಪ್ರಥಮ ಭಾರಿಗೆ ಕಾಂಗ್ರೆಸ್ಸೇತರ ಸರ್ಕಾರವನ್ನು ರಚಿಸಲು ಬಹುಪಾಲು ಕ್ಷೇತ್ರಗಳಲ್ಲಿ ಗದ್ದ ಜನತಾಪಕ್ಷಕ್ಕೆ ಸಾಧ್ಯವಾಯಿತು."

"ಜನತಾ ಪರ್ವ"ವೊಂದು ದುರದೃಷ್ಟಕರ "ಮಧ್ಯಕಾಲ" ಎಂದು ಎ. ಐ. ಸಿ. ಸಿ. (ಇಂದಿರಾ) ಪರಿಗಣಿಸಿದರೆ, ಇನ್ನೊಂದು ಎ. ಐ. ಸಿ. ಸಿ. 1977ರ ಜನತಾಪಕ್ಷದ ವಿಜಯವನ್ನು ತುರ್ತುಪರಿಸ್ಥಿತಿಗೆಡೆಮಾಡಿಕೊಟ್ಟ "ಅತ್ಯಂತ ದುರದೃಷ್ಟಕರ" ಬೆಳವಣಿಗೆಗಳ ಅನಿವಾರ್ಯ ಫಲ ಎಂದು ಗುರುತಿಸುತ್ತದೆ.

ಬೆಂಗಳೂರು ಎ. ಐ. ಸಿ. ಸಿ. ನಿರ್ಣಯದಲ್ಲಿ ಹೀಗೆ ಹೇಳಲಾಗಿದೆ:

"ದೇಶದಲ್ಲಿನ ಪರಿಸ್ಥಿತಿ ಗಂಭೀರವಾಗಿದೆ. ಪ್ರಜಾಪ್ರಭುತ್ವಕ್ಕೆ ದೊಡ್ಡ ಸವಾಲೇ ಇದೆ. ಇಲ್ಲಿ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ್ದು ಏನೆಂದರೆ, ಪಕ್ಷದೊಳಗೇ ಪ್ರಜಾಸತ್ತಾತ್ಮಕವಾಗಿ ಕಾರ್ಯ ನಿರ್ವಹಣೆಯಾಗದ ಪಕ್ಷವೊಂದರಿಂದ ಪ್ರಜಾಪ್ರಭುತ್ವದ ರಕ್ಷಣೆ ಸಾಧ್ಯವಿಲ್ಲ ಎಂಬುದು. ಪಕ್ಷದೊಳಗೇ ಆಗುವ ಪ್ರಜಾಪ್ರಭುತ್ವದ ಸವೆತ ಅಂತಿಮವಾಗಿ ದೇಶದಲ್ಲೇ ಪ್ರಜಾಪ್ರಭುತ್ವವನ್ನು ನೆಲಸಮ ಮಾಡಿ ಸರ್ವಾಧಿಕಾರಿ ಸರ್ಕಾರಗಳ ರಚನೆಗೆ ಎಡೆಮಾಡಿಕೊಟ್ಟಿವೆ ಎಂಬುದನ್ನು ಜನರು ಇತರ ದೇಶಗಳಲ್ಲಿ ಆಗಿರುವ ಘಟನೆಗಳಿಂದ ಕಲಿಯಬೇಕು."

ಕಾಂಗ್ರೆಸ್ಸಿನ ಸ್ವವಿಮರ್ಶೆ :

ಅಂದರೆ ಕಾಂಗ್ರೆಸ್ ಸ್ವವಿಮರ್ಶೆ ಮಾಡಿಕೊಳ್ಳುತ್ತಿದೆ. ಕಳೆದ ಹನ್ನೊಂದು ವರ್ಷಗಳ ಕಾಂಗ್ರೆಸ್ ಆಳ್ವಿಕೆಯಲ್ಲಿ ಪಕ್ಷದ ಮತ್ತು ದೇಶದ ಪ್ರಜಾಪ್ರಭುತ್ವದ ವಿನಾಶದಲ್ಲಿ ತಾನೇ ವಹಿಸಿದ ಪಾತ್ರವನ್ನು ಪುನರ್ ವಿಮರ್ಶಿಸುತ್ತಿದೆ. ದೇವರಾಜ ಅರಸು ಅಧ್ಯಕ್ಷರಾಗಿರುವ ಕಾಂಗ್ರೆಸ್ಸಿನ ದೃಷ್ಟಿಕೋನದಲ್ಲಿ ಇದೇ ಕಾಂಗ್ರೆಸ್ಸಿನ 90 ವರ್ಷದ ಇತಿಹಾಸದಲ್ಲಿನ "ದುರದೃಷ್ಟಕರ ಮಧ್ಯಕಾಲ." ಇಂದಿರಾ ಕಾಂಗ್ರೆಸ್ಸಿನಿಂದ ಕಾಂಗ್ರೆಸ್ ಭಿನ್ನವಾಗುವುದು ಇಲ್ಲಿಯೆ. ಜೊತೆಗೆ ಇತರ ಸರ್ವಾಧಿಕಾರಿ ವಿರೋಧಿ ಶಕ್ತಿಗಳೊಂದಿಗೆ ಒಪ್ಪಿಗೆಯಾಗುವುದು ಇಲ್ಲಿಯೇ.

ಕಾಂಗ್ರೆಸ್ಸಿಗೂ ಇತರ ಸರ್ವಾಧಿಕಾರಿ ವಿರೋಧಿ ಶಕ್ತಿಗಳಿಗೂ ವ್ಯತ್ಯಾಸವಿಲ್ಲವೆಂದೇನಲ್ಲ. (ಅದರಲ್ಲೂ ದುಡಿಯುವ ಜನರ ಪರವಹಿಸುವ ಪಕ್ಷಗಳೊಂದಿಗೆ ಸಾಕಷ್ಟು ವ್ಯತ್ಯಾಸಗಳಿವೆ.) ಕಾಂಗ್ರೆಸ್ಸಿನ ಪ್ರಕಾರ ಇಂದಿರಾಗಾಂಧಿ ಅಧಿಕಾರ ವಹಿಸಿಕೊಳ್ಳುವುದಕ್ಕೆ ಮುಂಚಿನ ಕಾಂಗ್ರೆಸ್ ಇತಿಹಾಸವೆಲ್ಲಾ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಮೂಲಭೂತ ಸಾಮಾಜಿಕ ಬದಲಾವಣೆಯ ಕಥೆಯೇ ಆಗಿದೆ. ಅದು ಆ ತರಹ ಆಗಿದ್ದರೆ, 1960ರ ದಶಕದ ಮಧ್ಯದಲ್ಲಿ ಪಕ್ಷದ ಮತ್ತು ದೇಶದ ಪ್ರಜಾಪ್ರಭುತ್ವವನ್ನು ನಾಶಮಾಡುವಂತಹ ವ್ಯಕ್ತಿಯ ಕೈಗೆ ಹೇಗೆ ಅಧಿಕಾರ ಹೋಯಿತು ಎಂಬ ಪ್ರಶ್ನೆ ಅವರನ್ನು ಕಾಡುವುದೇ ಇಲ್ಲ.

ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಮತ್ತು ಮೂಲಭೂತ ಸಾಮಾಜಿಕ ಬದಲಾವಣೆಯ ಸಲೀಸು ಕ್ರಿಯೆಯ ನಡುವೆ ಇಂದಿರಾ ಸರ್ಕಾರವೊಂದು ಅನಪೇಕ್ಷಣೀಯ ಘಟನೆಯಾಯಿತು ಎಂಬುದನ್ನು

ಇ.ಎಂ.ಎಸ್. ನಂಬೂದಿರಿಪಾಡ್

ಸಿ. ಪಿ. ಐ. (ಎಂ) ಮತ್ತು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದೃಷ್ಟಿಕೋನವುಳ್ಳ ಇತರ ಗುಂಪುಗಳು ಒಪ್ಪುವುದೇ ಇಲ್ಲ. ಅದರ ಬದಲು, ಸ್ವಾತಂತ್ರ್ಯಕ್ಕೆ ಮೊದಲು ಮತ್ತು ನಂತರ ಕಾಂಗ್ರೆಸ್ ತೆಗೆದುಕೊಂಡ ನೀತಿಗಳ ತರ್ಕಬದ್ಧ ಪರಿಣಾಮವಾಗಿ ಇಂದಿರಾ ಸರ್ಕಾರದ ಸರ್ವಾಧಿಕಾರ ಬಂತು.

ಗಾಂಧೀವಾದಿ-ನೆಹರೂವಾದಿಗಳ ಪರಿಭಾಷೆಯನ್ನು ಬಿಟ್ಟು ಹೇಳುವುದಾದರೆ ಕಾಂಗ್ರೆಸ್ ಅನುಸರಿಸುತ್ತಾ ಬಂದ ಆರ್ಥಿಕ ಮತ್ತು ರಾಜಕೀಯ ನೀತಿ ಇದು: ಭಾರತೀಯ ಸಮಾಜದ ಪಾಳೆಯಶಾಹಿ ಸಂಸ್ಥೆಗಳನ್ನು ಉಳಿಸಿಕೊಂಡೇ ಬಂಡವಾಳಶಾಹಿ ಪಥದಲ್ಲಿ ಆಧುನಿಕತೆ ಸಾಧಿಸುವುದು. ಇದಕ್ಕಾಗಿ ಬ್ರಿಟೀಷ್ ಮತ್ತು ಇತರ ಗುತ್ತೇದಾರಿಗಳ ಜೊತೆಗೆ ಸಹಯೋಗವಿದೆ. ಪಂಚವಾರ್ಷಿಕ ಯೋಜನೆಗಳು, ರಾಜರ ಆಳ್ವಿಕೆಯಲ್ಲಿದ್ದ ರಾಜ್ಯಗಳ ಏಕೀಕರಣ, ಭೂಸುಧಾರಣಾ ಕಾನೂನುಗಳು, ಸಮಾಜವಾದಿ ಜಗತ್ತಿನೊಂದಿಗೆ ಸ್ನೇಹ (ಸಾಮ್ರಾಜ್ಯಶಾಹಿಗಳ ಜೊತೆಗಿನ ಸಂಬಂಧವನ್ನು ಕಡಿದುಕೊಳ್ಳದೆ), ಮುಂತಾದವು ಬೆಳೆಯುತ್ತಿದ್ದ ಬಂಡವಾಳಶಾಹಿ ವರ್ಗದ ಹಿತಾಸಕ್ತಿಗಳನ್ನು ಪ್ರತಿಬಿಂಬಿಸುತ್ತವೆ. "ಸಮಾಜವಾದಿ ಸಮಾಜವನ್ನು ಕಟ್ಟುವುದು" ಮುಂತಾದ ಮಾತಿನ ಹಿಂದೆ ಈ ವರ್ಗ ಗುರಿಗಳನ್ನು ಸಾಧಿಸಿಕೊಳ್ಳಲಾಗುತ್ತಿದೆ.

ದುಡಿಯುವ ಜನರ ಮತ್ತು ಎಡಪಂಥವಾದೀ ಪಕ್ಷಗಳು ಪ್ರತಿಭಟನೆ ಮಾಡಲು ಸರ್ಕಾರದ ಈ ಮೇಲಣ ನೀತಿಗಳು ಕಾರಣವಾದವು. ಸ್ವತಂತ್ರ ಭಾರತದಲ್ಲಿ ಒಂದೆಡೆ ಸರ್ಕಾರ, ಕಾಂಗ್ರೆಸ್ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳು ಇನ್ನೊಂದೆಡೆ ದುಡಿಯುವ ಜನ ಸಮೂಹ ಮತ್ತು ಎಡಪಕ್ಷಗಳು- ಈ ಎರಡರ ನಡುವೆ ಘರ್ಷಣೆ ಉದ್ಭವವಾಗುವುದು ಈ ದೇಶದ ರಾಜಕೀಯ ವ್ಯವಸ್ಥೆಯೇ ಆಗಿತ್ತು.

ಇಂದಿರಾಗಾಂಧಿಯ ಆಳ್ವಿಕೆಗಿಂತಲೂ ಮುಂಚಿನಿಂದಲೇ ಕಾಂಗ್ರೆಸ್ ಪಕ್ಷದ ಸರ್ಕಾರವು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡಲು ಶುರು ಮಾಡಿತ್ತು ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು. ಸ್ವಾತಂತ್ರ ಬಂದ ದಿವಸಗಳಲ್ಲೇ ತೆಲಂಗಾಣ ರೈತರ ಬಂಡಾಯವನ್ನು ಮೃಗೀಯ ರೀತಿಯಲ್ಲಿ ಮರ್ದನ ಮಾಡಿದ್ದು ಕಾಂಗ್ರೆಸ್ ಆಡಳಿತಗಾರರು ಮುಂದೆ ನಡೆದುಕೊಳ್ಳಬಹುದಾದ ರೀತಿನೀತಿಗಳನ್ನು ತೋರಿಸಿತ್ತು. ಅನೇಕ ರಾಜ್ಯಗಳಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಲಾಗಿತ್ತು ಕೂಡ. ಕಮ್ಯುನಿಸ್ಟ್ ಪಕ್ಷವು ಈ ಎಲ್ಲ ಅಡ್ಡಿ ಆತಂಕಗಳನ್ನು ಎದುರಿಸಿಯೂ ಕೂಡ 1952 ಮಹಾ ಚುನಾವಣೆಗಳಲ್ಲಿ ಪ್ರಭಲ ವಿರೋಧಿ ಪಕ್ಷವಾಗಿ ಹೊರಹೊಮ್ಮಿತು. 1957 ರಲ್ಲಿ ಕಾಂಗ್ರೆಸ್ಸೇತರ ಮತ್ತು ಪ್ರಥಮ ಕಮ್ಯುನಿಸ್ಟ್ ಸರ್ಕಾರ ರಚಿಸಲೂ ಎಡ ಪಕ್ಷಗಳಿಗೆ ಸಾಧ್ಯವಾಗಿದ್ದರಲ್ಲಿ ಆಶ್ಚರ್ಯವನ್ನೇನೂ ಪಡಬೇಕಿಲ್ಲ. ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಬೆಳೆಯುತ್ತಲಿದ್ದ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿಯನ್ನು ತಣ್ಣಗೆ ಮಾಡಲು ಏನು ಬೇಕಿತ್ತೋ ಅದೆಲ್ಲವನ್ನೂ ಮಾಡಿತು.

1959 ರಲ್ಲಿ ಕೇರಳದಲ್ಲಿನ ಕಾಂಗ್ರೆಸ್ಸೇತರ ಹಾಗೂ ಕಮ್ಯುನಿಸ್ಟ್ ಪಕ್ಷದ ಪ್ರಥಮ ಸರ್ಕಾರವನ್ನು ವಜಾ ಮಾಡಿದ್ದು ಕೇಂದ್ರ ಕಾಂಗ್ರೆಸ್ ಸರ್ಕಾರದ ಮೊದಲ ಜನ ವಿರೋಧಿ ಕುರುಹು. 1971-72 ರಲ್ಲಿ ಪಶ್ಚಿಮ ಬಂಗಾಳದಲ್ಲಿ ಅರೆಫ್ಯಾಸಿಸ್ಟ್ ಭೀತಿಗಳನ್ನು ಕಾಂಗ್ರೆಸ್ ಸರ್ಕಾರ ಸ್ಥಾಪಿಸಿತು. 1975 ರಲ್ಲಿ ದೇಶಾದ್ಯಂತ ಕಾಂಗ್ರೆಸ್ ಸರ್ಕಾರವು ಆಂತರಿಕ ತುರ್ತುಪರಿಸ್ಥಿತಿಯನ್ನು ಜಾರಿಗೊಳಿಸಿತು. ಸರ್ಕಾರದ ಈ ಜನವಿರೋಧಿ ಕ್ರಮಗಳಲ್ಲಿ ಕೆಲವು ನಡೆದದ್ದು ನೆಹರೂ ಅಂತಹವರೂ ದೇಶದ ನಾಯಕರಾಗಿದ್ದಾಗ ಎಂಬುದನ್ನು ನಾವು ಮರೆಯುವಂತಿಲ್ಲ.

ಈ ಎಲ್ಲ ಸಂಗತಿಗಳನ್ನು ಜನತೆಯಿಂದ ಮುಚ್ಚಿಡಲು ಬೆಂಗಳೂರಿನಲ್ಲಿ ಜರುಗಿದ ಎ. ಐ. ಸಿ. ಸಿ. ಅಧಿವೇಶನದ ನಿರ್ಣಯವು ಪ್ರಯತ್ನಿಸಿಲ್ಲರೂ, ಕಮ್ಯುನಿಸ್ಟರ ಮತ್ತು ವಾಮಪಂಥೀಯ ಚಳುವಳಿಯೊಂದಿಗೆ ಹೊಸದೊಂದು ಸಂಬಂಧದ ಅಧ್ಯಾಯವನ್ನು ತೆರೆಯಬೇಕೆಂದು ಅದು ಹೇಳಿದೆ. ಇಡೀ ದೇಶವನ್ನು ತಾವೇ ಪ್ರತಿನಿಧಿಸುವವರು ಎಂದು ಒಂದು ಕಾಲಕ್ಕೆ ಹೇಳಿಕೊಳ್ಳುತ್ತಿದ್ದ ಕಾಂಗ್ರೆಸ್ಸಿಗರು ಇಂದು ಸರ್ವಾಧಿಕಾರ ಮತ್ತು ಕೋಮುವಾದವನ್ನು ಹೋರಾಡುತ್ತಿರುವವರೊಡನೆ ತಾವೂ ಸಹಕರಿಸಬೇಕು ಎಂದು ಹೇಳುತ್ತಿದ್ದಾರೆ. ಅವರ ಬೆಂಗಳೂರು ಅಧಿವೇಶನದ ನಿರ್ಣಯ ಹೀಗೆ ಹೇಳುತ್ತದೆ:

"ಅನೇಕ ಧರ್ಮಗಳು ಭಾಷೆಗಳು ಇರುವ ನಮ್ಮ ಸಮಾಜ ಬಹುಪಂಥವಾದಿಯಾದದ್ದು (pluralistic). ನಮ್ಮ ಸಮಾಜದ ಎಲ್ಲಾ ವಿಭಾಗಗಳಿಗೂ ಸಮನಾದ ಮತ್ತು ನ್ಯಾಯಯುತವಾದ ಪಾಲು ಸಿಗಬೇಕು. ಆದ್ದರಿಂದಲೇ ನಾವು ಧರ್ಮನಿರಪೇಕ್ಷತೆಯನ್ನು ನಮ್ಮ ಪ್ರಜಾಪ್ರಭುತ್ವವಾದಿ ರಚನೆಯ ಮುಖ್ಯ ಅಂಶವನ್ನಾಗಿ ಮಾಡಿಕೊಂಡಿರುವುದು. ಆರ್. ಎಸ್. ಎಸ್. ಮತ್ತು ಅದರೊಂದಿಗೆ ಇನ್ನೂ ಸಂಬಂಧವಿಟ್ಟುಕೊಂಡಿರುವ ಜನಸಂಘದ ಪ್ರಾಬಲ್ಯದಿಂದಾಗಿ ಜಾತ್ಯಾತೀತತೆಗೆ ಗಂಭೀರ ಸವಾಲಿದೆ. ಮುಂದಿನ ಚುನಾವಣೆಗಳಲ್ಲಿ ಈ ಶಕ್ತಿಗಳನ್ನು ಸೋಲಿಸದಿದ್ದರೆ ಭಾರತದ ಭವಿಷ್ಯ ಅಂಧಕಾರಮಯವಾಗುವುದು ಖಂಡಿತ."

"ಈ ಹಿನ್ನೆಲೆಯಲ್ಲಿ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮತ್ತು ಜನತಾ (ಎಸ್) ಇವುಗಳ ಮೈತ್ರಿಗೆ ಅಪಾರ ಪ್ರಾಮುಖ್ಯತೆ ಬರುತ್ತದೆ. ಸರ್ವಾಧಿಕಾರ ಮತ್ತು ಕೋಮುವಾದವನ್ನು ಪರಿಣಾಮಕಾರಿಯಾಗಿ ಹೋರಾಡಲು ಈ ಜೋಡಿಯಿಂದ ಮಾತ್ರ ಸಾಧ್ಯ. ಇದರ ಜೊತೆಗೆ ಎ. ಐ. ಸಿ. ಸಿ. ಖುಷಿಯಿಂದ ಗಮನಿಸುವ ವಿಷಯವೆಂದರೆ, ಪ್ರಗತಿಪರ ಪಕ್ಷಗಳಾದ ಸಿ. ಪಿ. ಐ., ಸಿ. ಪಿ. ಐ. (ಎಂ) ಮತ್ತು ಇತರ ಎಡಪಕ್ಷಗಳು ಕಾಂಗ್ರೆಸ್-ಜನತಾ (ಎಸ್) ಮೈತ್ರಿ ಕೂಟವನ್ನು ನಿಸ್ಸಂದೇಹವಾಗಿ ಬೆಂಬಲಿಸಿವೆ ಎಂಬುದು. ದೇಶದಲ್ಲಿರುವ ಎಲ್ಲ ಪ್ರಜಾಪ್ರಭುತ್ವವಾದಿ, ಪ್ರಗತಿಶೀಲ ಮತ್ತು ಜಾತ್ಯಾತೀತ ಶಕ್ತಿಗಳನ್ನು ಈ ಬಣದೊಳಕ್ಕೆ ಸೇರುವಂತೆ ನಾವು ಪ್ರಯತ್ನ ಮಾಡಬೇಕು."

ಕಮ್ಯುನಿಸಂ ವಿರೋಧ :

ಇದನ್ನು ಎ. ಐ. ಸಿ. ಸಿ. (ಐ) ನಿರ್ಣಯಕ್ಕೆ ಹೋಲಿಕೆ ಮಾಡಿ ನೋಡಿ. ಅದರಲ್ಲಿ "ಕಳೆದ ಹತ್ತು ವರ್ಷಗಳಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಸಮಾಜವಾದ, ಪ್ರಜಾ

[6ನೇ ಪುಟ ನೋಡಿ]

ಸಂಘಟಿತ ಕಾರ್ಮಿಕರ ಮುಷ್ಕರ ಮತ್ತು ಬಡಜನತೆ

ಸಾರ್ವಜನಿಕ ಕ್ಷೇತ್ರದಲ್ಲಿರುವ ಕಾರ್ಖಾನೆಗಳಲ್ಲಿ ಮತ್ತು ದೊಡ್ಡ ಬಂಡವಾಳಶಾಹಿಗಳ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರು ಮತ್ತು ಬ್ಯಾಂಕ್ ಮುಂತಾದೆಡೆ ಕೆಲಸ ಮಾಡುವ ನೌಕರರು ಹೆಚ್ಚು ವೇತನ ಮತ್ತು ಸೌಲಭ್ಯಗಳಿಗಾಗಿ ಬೇಡಿಕೆ ಮುಂದಿಟ್ಟಾಗಲೆಲ್ಲಾ ದೇಶದಬೂರ್ಜ್ವಾ ನಾಯಕರು, ಬುದ್ಧಿಜೀವಿಗಳು ಹಾಗೂ ಅವರ ರಾಜಕೀಯ ಪಕ್ಷಗಳು ತಮ್ಮ 'ದೇಶಭಕ್ತಿ'ಯ, ದೇಶದ ಬಹುಸಂಖ್ಯಾತ ದರಿದ್ರರ ಬಗ್ಗೆ ತಮ್ಮ 'ಅನುಕಂಪ'ದ ಪ್ರದರ್ಶನ ಆರಂಭಿಸುತ್ತವೆ. ಈ ಸಂಘಟಿತ ಕಾರ್ಮಿಕರು ಮತ್ತು ನೌಕರರು ದೇಶವನ್ನು ಕೊಳ್ಳೆ ಹೊಡೆಯುತ್ತಿದ್ದಾರೆ ಅಂತ ಗುಲ್ಲೆಬ್ಬಿಸುತ್ತಾರೆ. ಇವರ ಅಪಪ್ರಚಾರ ಎಷ್ಟೊಂದು ಭರದಿಂದ ಸಾಗಿದೆಯೆಂದರೆ ಬಿಳಿಕಾಲರ್ ನೌಕರರು ಮುಷ್ಕರ ಹೂಡುವಾಗ ತಾವೇನಾದರೂ ತಪ್ಪು ಮಾಡುತ್ತಿದ್ದೇವೇನೋ ಎಂದು ಅನುಮಾನ ಪಡುವುದನ್ನು ಕಾಣಬಹುದು. ಅಷ್ಟೇ ಅಲ್ಲದೆ ಕೆಲವೊಮ್ಮೆ ಕಾರ್ಮಿಕ ವರ್ಗದ ಪರವಾಗಿ ಯೋಚಿಸುವವರೂ ಇದರಲ್ಲಿ ಸ್ವಲ್ಪವಾದರೂ ನಿಜಾಂಶ ಇರಲಿಕ್ಕಿಲ್ಲವೇ ಎಂಬ ಸಂಶಯಪಡುತ್ತಿದ್ದಾರೆ. ಆದ್ದರಿಂದ ಬೂರ್ಜ್ವಾ ನಾಯಕರ ಹಾಗೂ ಅವರ ಹಿಂಬಾಲಕ ಬುದ್ಧಿಜೀವಿಗಳ ಈ ಹೇಳಿಕೆಗಳ ಹಿಂದಿರುವ ಮೋಸದ ಬಗ್ಗೆ ವಿವೇಚನೆ ನಡೆಸಬೇಕು.

ನಿಜವೇತನ ಏರಿಕೆ ಎಷ್ಟು?

ಸಂಘಟಿತ ಕಾರ್ಮಿಕರ ಹಾಗೂ ನೌಕರರ ಮೇಲಿರುವ ಮುಖ್ಯ ಆರೋಪವೆಂದರೆ ಅವರು ಸುಸಂಘಟಿತರಾಗಿರುವುದರಿಂದ ಚಳುವಳಿ ಹೂಡಿ ತಮ್ಮ ವೇತನ ಹೆಚ್ಚಿಸಿಕೊಳುತ್ತಾರೆ. ದೇಶದ ಒಟ್ಟು ಉತ್ಪನ್ನದಲ್ಲಿ ಸಾಧ್ಯವಾದಷ್ಟು ಹೆಚ್ಚು ಭಾಗ ಪಡೆಯಲು ಸ್ವಾರ್ಥಪೂರ್ಣ ಪ್ರಯತ್ನ ನಡೆಸುತ್ತಾರೆ. ಇದರಿಂದಾಗಿ ಇತರ ಬಡವರ ಪಾಲು ಬಹಳ ಕಡಿಮೆಯಾಗಿ ಬಡತನ ಹೆಚ್ಚುತ್ತಾ ಹೋಗುತ್ತದೆ. ಆದರೆ ಸಂಘಟಿತರ ವೇತನ ಮತ್ತು ಜೀವನ ಮಟ್ಟ ನಿಜವಾಗಿಯೂ ಏರುತ್ತಿದೆಯೇ? ಅಂಕಿ-ಅಂಶಗಳ ಪರಿಶೀಲನೆ ಮಾಡಿದಾಗ ಈ ಮಾತಿನಲ್ಲಿ ಹುರುಳಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕೈಗೆ ಸಿಗುವ ದುಡ್ಡಿನ ಮೊತ್ತದ ರೂಪದಲ್ಲಿ ಸಂಬಳ ಹೆಚ್ಚುತ್ತಿದ್ದರೂ ಬೆಲೆಯೇರಿಕೆಯನ್ನು ಗಮನಿಸಿದರೆ ಸಂಬಳ ವಾಸ್ತವದಲ್ಲಿ ಹೆಚ್ಚಿಲ್ಲ ಎಂದು ತಿಳಿಯುತ್ತದೆ. ರಾಷ್ಟ್ರೀಯ ಕಾರ್ಮಿಕ ಆಯೋಗದ 1969ರ ವರದಿಯಿಂದ ಪಡೆದ ಈ ಅಂಕೆ-ಸಂಖ್ಯೆಗಳನ್ನು ಗಮನಿಸಿ:

ಒಬ್ಬ ಕಾರ್ಖಾನೆ ಕಾರ್ಮಿಕನಿಗೆ ಸಿಗುವ ಸರಾಸರಿ ನಿಜ ವೇತನದ ಸೂಚ್ಯಂಕ:

1949 ರಲ್ಲಿ 100 ಎಂದಿದ್ದರೆ	1958 ರಲ್ಲಿ 119
1958 ರಲ್ಲಿ 100 ಎಂದಿದ್ದರೆ	1963 ರಲ್ಲಿ 106
	1964 ರಲ್ಲಿ 103
	1974 ರಲ್ಲಿ 101
	1975 ರಲ್ಲಿ 103

ಅಂದರೆ 1949 ರಿಂದ 1958ರ ಮಧ್ಯೆ ನಿಜವೇತನ 19% ಹೆಚ್ಚಿದರೆ 1961 ರಿಂದ 1975 ರ ನಡುವೆ ಅದರಲ್ಲಿ ಹೆಚ್ಚಿನ ಬದಲಾವಣೆ ಏನೂ ಆಗಿಲ್ಲ. 1939ರ ನಿಜವೇತನದೊಡನೆ ಹೋಲಿಸಿದಾಗಲೂ ಈ ಹೆಚ್ಚಳ ತೀರಾ ಕಮ್ಮಿ. ಒಂದು ಲೆಕ್ಕಾಚಾರದ ಪ್ರಕಾರ 1939 ರಿಂದ 1975ರ ನಡುವಿನ 36 ವರ್ಷಗಳಲ್ಲಿ ಕಾರ್ಖಾನೆ ಕಾರ್ಮಿಕರ ನಿಜವೇತನದಲ್ಲಿ ಆದ ಹೆಚ್ಚಳ 27%. 1975ರ ನಂತರ ತುಟ್ಟಿ ಭತ್ಯ ಕಡಿತ, ಬೋನಸ್ ಕಡಿತದಿಂದಾಗಿ ಈ ಹೆಚ್ಚಳವೂ ಹಾಗೇ ಉಳಿದಿಲ್ಲ. ಈ ಮಧ್ಯೆ ಆರ್ಥಿಕ ಕ್ಷೇತ್ರದಲ್ಲಾದ ಬೆಳವಣಿಗೆ, ಕಾರ್ಮಿಕರ ಕುಶಲತೆ ಮತ್ತು ಉತ್ಪಾದಕತೆಯಲ್ಲಾದ ಹೆಚ್ಚಳ ಮತ್ತು ಬಳಕೆದಾರರ ಬೆಲೆ ಸೂಚ್ಯಂಕ (consumer's price index) ದಲ್ಲಿರುವ ದೋಷಗಳು (ಈ ಸೂಚ್ಯಂಕಗಳು ಬೆಲೆಯೇರಿಕೆಯನ್ನು ಸರಿಯಾಗಿ ಗಣನೆಗೆ ತಗೊಂಡಿಲ್ಲ ಎಂಬ ಆಪಾದನೆಗಳು ಈಗ ರುಜುವಾತಾಗಿದೆ) ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡರೆ 1939 ರಿಂದ ಇದುವರೆಗೆ ಕೈಗಾರಿಕಾ ಕಾರ್ಮಿಕರ ಜೀವನಮಟ್ಟದಲ್ಲಿ ಗಣನೀಯ ಹೆಚ್ಚಳ ಏನೂ ಆಗಿಲ್ಲ; ಕಳೆದ ಎರಡು ದಶಕಗಳಲ್ಲಂತೂ ಏನೂ ಹೆಚ್ಚಿಲ್ಲ. ಬಹುಶಃ ಕಡಿಮೆಯೇ ಆಗಿದೆ ಎಂದು ಹೇಳಬಹುದು.

ಕೇಂದ್ರ ಸರಕಾರೀ ನೌಕರರ ನಿಜ ವೇತನದ 'ಏರಿಕೆ' ಹೀಗಿದೆ:

ವರ್ಷ	1960	1972
ಜವಾನ	100	105
ಲೋವರ್ ಡಿವಿಜನ್-ಕ್ಲಾರ್ಕ್	100	91
ಅಪ್ಪರ್ "	100	82
ಅಸಿಸ್ಟೆಂಟ್	100	78
ಕ್ಲಾಸ್ II	100	63
ಕ್ಲಾಸ್ I A	100	56
ಕ್ಲಾಸ್ I B	100	55
ಕ್ಲಾಸ್ I C	100	58

ಅಂದರೆ ಅತೀ ಕಡಿಮೆ ಸಂಬಳ ಪಡೆಯುತ್ತಿದ್ದ ಜವಾನರ ಸಂಬಳದಲ್ಲಿ ಸ್ವಲ್ಪ ಹೆಚ್ಚಳವಾಯಿತು. ಆದರೆ ಇತರ ಎಲ್ಲರ ಪ್ರತ್ಯಕ್ಷ ವೇತನ ಕಡಿಮೆಯಾಯಿತು. ರಾಷ್ಟ್ರೀಯ ಕಾರ್ಮಿಕ ಆಯೋಗದ ಅಂಕಿ-ಅಂಶಗಳ ಪ್ರಕಾರ 1952 ರಿಂದ 1964ರ ಅವಧಿಯಲ್ಲಿ ಕಾರ್ಮಿಕರ ಉತ್ಪಾದಕ ಶಕ್ತಿ 63% ಹೆಚ್ಚಿತು. ಆದರೆ ತಮ್ಮ ದುಡಿಮೆಯಿಂದ ಉತ್ಪಾದಿಸಿದ ಹೊಸ ಮೌಲ್ಯದಲ್ಲಿ ಕಾರ್ಮಿಕರ ಮತ್ತು ನೌಕರರ ಪಾಲು 1949 ರಲ್ಲಿ 53.3% ಇದ್ದರೆ 1971 ರಲ್ಲಿ ಅದು 34.7%ಕ್ಕೆ ಇಳಿಯಿತು. ಹಾಗಿದ್ದರೆ ವೇತನ ಹೆಚ್ಚಳದ ಈ ಮಾತು ಅಪಪ್ರಚಾರವಲ್ಲದೆ ಬೇರೇನು? ರಾಷ್ಟ್ರೀಯ ಉತ್ಪನ್ನದಲ್ಲಿ ತಮ್ಮ ಪಾಲನ್ನು ಹೆಚ್ಚಿಸಿಕೊಂಡವರು ನಿಜವಾಗಿ ಯಾರು? ಕಾರ್ಮಿಕರೇ ಅಥವಾ ಕೈಗಾರಿಕೋದ್ಯಮಿಗಳೇ?

ಬೂರ್ಜ್ವಾ ನಾಯಕರು ಮತ್ತು ಅವರ ತೊತ್ತುಗಳಾದ ಕೆಲವು ಬುದ್ಧಿಜೀವಿಗಳು ಮೇಲಿನ ಅಂಕಿ-ಅಂಶಗಳ ಬಗ್ಗೆ ಬೇಕೆಂದೇ ಕುರುಡಾಗಿದ್ದಾರೆ. ಆದ್ದರಿಂದ ಸಂಘಟಿತ ಕಾರ್ಮಿಕರು ಹಾಗೂ ನೌಕರರು ಅಸಂಘಟಿತರನ್ನು ಶೋಷಿಸುತ್ತಿದ್ದಾರೆ ಎಂದು ಅವರು ಪ್ರಚಾರ ಮಾಡುತ್ತಿದ್ದಾರೆ. ಕೆಲವರಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗುತ್ತೇದಾರಿ ಬಂಡವಾಳಗಾರರು ಮತ್ತು ದೊಡ್ಡ ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ದುಡಿಯುವ ಸಂಘಟಿತ ಕಾರ್ಮಿಕರು ಮತ್ತು ನೌಕರರು ಇಬ್ಬರೂ ಸಂಚು ಹೂಡಿ ಹಳ್ಳಿಗಳಲ್ಲಿರುವ ರೈತರು ಮತ್ತು ಬೇಸಾಯ ಕೂಲಿಕಾರರನ್ನು ಮತ್ತು ಸಣ್ಣ ಉದ್ಯಮಗಳಲ್ಲಿರುವ ಅಸಂಘಟಿತ ಕಾರ್ಮಿಕರನ್ನು ಶೋಷಿಸುತ್ತಿದ್ದಾರೆ ಎನ್ನುತ್ತಾರೆ. ಹಿಂದೆ ತಿಳಿಸಿರುವ ಅಂಕಿ-ಅಂಶಗಳೊಡನೆ ಈ ಮುಂದೆ ಕೊಡುವ ಅಂಕೆ-ಸಂಖ್ಯೆಗಳನ್ನು ಸೇರಿಸಿ ವಿಶ್ಲೇಷಿಸಿದಾಗ ಬಂಡವಾಳಶಾಹಿಗಳು ಮತ್ತು ಸಂಘಟಿತ ಕಾರ್ಮಿಕರ ನಡುವೆ ಇದೆಯೆನ್ನಲಾದ 'ಪಿತೂರಿ' ಎಷ್ಟು ಸುಳ್ಳು ಎಂದು ತಿಳಿಯುತ್ತದೆ. ಈ ಅಂಕೆ-ಸಂಖ್ಯೆ ಕೊಟ್ಟವರು ಜಗದ್ವಿಖ್ಯಾತ ಕಾರ್ಮಿಕ ಇತಿಹಾಸಜ್ಞರಾದ ಪ್ರೊಫೆಸರ್ ಜುರ್ಗೆನ್ ಕುಜ್‌ಯೆನ್ಸ್‌ಕಿಯವರು. 1900ರ ಪ್ರತ್ಯಕ್ಷ ವೇತನ 100 ಎಂದಿಟ್ಟುಕೊಂಡರೆ ಈ ಕೆಳಗಿನ ವರ್ಷಗಳಲ್ಲಿ ಕಾರ್ಖಾನೆ ಕಾರ್ಮಿಕರ ಪ್ರತ್ಯಕ್ಷ ವೇತನ ಹೀಗಿದೆ:

ವರ್ಷ	ಪ್ರತ್ಯಕ್ಷ ವೇತನ
1880-89	127
1890-99	112
1899-09	111
1909-19	98
1920-29	103
1930-38	129

ರೈತರ ಅಸಂಘಟಿತರ ಶೋಷಕರು ಯಾರು?

ಆದ್ದರಿಂದ ಸುಮಾರು ಒಂದು ಶತಮಾನದಲ್ಲಿ ಕಾರ್ಮಿಕರ ಪ್ರತ್ಯಕ್ಷ ವೇತನದಲ್ಲಿ ಅಂದರೆ ಜೀವನಮಟ್ಟದಲ್ಲಿ ಆದ ಹೆಚ್ಚಳ ತೀರಾ ಅತ್ಯಲ್ಪ. ಆದರೆ ಕೇವಲ 1972-76 ರಲ್ಲಿ ಈ ದೇಶದ 25 ದೊಡ್ಡ ವ್ಯಾಪಾರೀ ಮನೆತನಗಳ ಆಸ್ತಿ 61.2 ರಷ್ಟು ಹೆಚ್ಚಾಯಿತು. ನಿಜವಾಗಿಯೂ ಸಂಘಟಿತ ಕಾರ್ಮಿಕರು ಅಸಂಘಟಿತರ ವರಮಾನ ಹೆಚ್ಚದಂತೆ ಮಾಡಲು ಗುತ್ತೇದಾರಿ ಬಂಡವಾಳಶಾಹಿಗಳೊಡನೆ ಕೈಮಿಲಾಯಿಸಿದ್ದಾರೆಯೇ? ಅವರು ಹಳ್ಳಿಗಳಲ್ಲಿರುವ ಅಸಂಘಟಿತರನ್ನು, ರೈತರನ್ನು ಶೋಷಿಸುತ್ತಿದ್ದಾರೆ ಎಂಬುದೂ ಇದೇ ರೀತಿ ಅರ್ಥಹೀನ. ಈ ರೀತಿ ಹೇಳುವವರು ಅಥವಾ ಅದನ್ನು ನಿಜವೆಂದು ನಂಬುವವರು ಎರಡು ವಿಷಯಗಳನ್ನು ಸರಿಯಾಗಿ ವಿವೇಚಿಸುವುದಿಲ್ಲ. ಮೊದಲನೇಯದು: ಶೋಷಣೆ ಎಂದರೇನು ಎಂಬುದರ ಬಗೆಗೆ ಇರುವ ಅಸ್ಪಷ್ಟತೆ. ಸರಳವಾಗಿ ಹೇಳುವುದಾದರೆ ಇತರರ ದುಡಿಮೆಗೆ ತಕ್ಕ ಪರಿಹಾರ ಕೊಡದೆ ಕಬಳಿಸುವುದೇ ಶೋಷಣೆ. ಸಣ್ಣ ಉದ್ಯಮಗಳಲ್ಲಿರುವ ಅಸಂಘಟಿತ ಕಾರ್ಮಿಕರನ್ನಾಗಲೀ ಹಳ್ಳಿಗಳಲ್ಲಿ ಭೂಮಿಯಲ್ಲಿ ಗೇಯುವ ರೈತರನ್ನಾಗಲೀ, ಭೂಹೀನ ಕೂಲಿಕಾರರನ್ನಾಗಲೀ ಕೆಲಸಕ್ಕೆ ಇಟ್ಟುಕೊಂಡವರು ಪಟ್ಟಣಗಳ ದೊಡ್ಡ ಕಾರ್ಖಾನೆಗಳಲ್ಲಿ, ಕಚೇರಿಗಳಲ್ಲಿ ದುಡಿಯುವ ಸಂಘಟಿತರಂತೂ ಅಲ್ಲ. ಅವರ ಶ್ರಮದ ಉತ್ಪಾದನೆಗಳ ಮೇಲೆ ಈ ಸಂಘಟಿತ ಕಾರ್ಮಿಕರು ಅಧಿಕಾರ ಜಮಾಯಿಸುವುದೂ ಸಾಧ್ಯವಿಲ್ಲ. ಹೀಗಿರುವಾಗ ಶೋಷಣೆಯ ಪ್ರಶ್ನೆ ಎಲ್ಲಿದೆ? ಎರಡನೆಯ ತಪ್ಪು: ಹಳ್ಳಿಗಳಲ್ಲಿ ರೈತರ ನಡುವೆ ಇರುವ ವರ್ಗಭೇದವನ್ನು ಗಣನೆಗೆ ತೆಗೆದುಕೊಳ್ಳದೇ ಇರುವುದು. ನೂರಾರು ಎಕರೆ ಜಮೀನು ಹೊಂದಿ ತಾವಾಗಿ ಸ್ವಂತ ದುಡಿಯದೆ ಕೂಲಿಯಾಳುಗಳಿಂದ ಕೆಲಸ ನಡೆಸುವ ಭೂಮಾಲಕರಿಗೂ ಮತ್ತು ಕೇವಲ ಸ್ವಲ್ಪ ಜಮೀನಲ್ಲಿ ಸ್ವಂತ ದುಡಿಮೆ ನಡೆಸುವ ಸಣ್ಣ ಮತ್ತು ಬಡ ರೈತರಿಗೂ ಇರುವ ಭೇದವನ್ನು ಬೇಕೆಂದೇ ಮರೆಮಾಚಿ ಇವರಿಬ್ಬರನ್ನೂ ಮತ್ತು ಭೂಹೀನ ಕೃಷಿ ಕೂಲಿಕಾರರನ್ನೂ ನಗರದ ಕಾರ್ಮಿಕರು ಮತ್ತು ನೌಕರರು ಶೋಷಿಸುತ್ತಿದ್ದಾರೆ ಎಂಬ ವಾದ ಎಷ್ಟು ಹಾಸ್ಯಾಸ್ಪದ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೂ ಸರ್ಕಾರದ ಅಂಕಿ-ಅಂಶಗಳೇ ಅವರ ಈ ವಾದವನ್ನು ಹೇಗೆ ಸುಳ್ಳಾಗಿಸಿವೆ ಎಂಬುದನ್ನು ನೋಡೋಣ.

ಭಾರತದ ಜನಗಣತಿಯ ಪ್ರಕಾರ 1961 ರಲ್ಲಿ ನಮ್ಮ ಹಳ್ಳಿಗಳಲ್ಲಿ ದುಡಿಯುವವರಲ್ಲಿ 15.3% ಕೃಷಿಕೂಲಿಕಾರರಿದ್ದರು. 1971 ರಲ್ಲಿ ಆ ಸಂಖ್ಯೆ 24.9%ಕ್ಕೆ ಏರಿದೆ. ಈ ಏರಿಕೆ 1971ರ ನಂತರವೂ ಅದೇ ರೀತಿ ಮುಂದುವರಿಯುತ್ತಿದೆ. 1963-64ರ ಕೃಷಿಕಾರ್ಮಿಕ ವಿಚಾರಣೆ (Agricultural Labour Enquiry) ಮತ್ತು 1974-75ರ ಗ್ರಾಮಾಂತರ ಕಾರ್ಮಿಕರ ವಿಚಾರಣೆ (Rural Labour Enquiry)ಯ ವರದಿಗಳ ಪ್ರಕಾರ 1963-64 ಮತ್ತು 1974-75ರ ನಡುವೆ ಕೃಷಿಕಾರ್ಮಿಕರ ನಿಜ ವರಮಾನದಲ್ಲಿ ಗಂಡಸರಿಗೆ ಮೂರನೇ ಒಂದರಷ್ಟು ಮತ್ತು ಹೆಂಗಸರು ಮತ್ತು ಮಕ್ಕಳಿಗೆ 50%ದಷ್ಟು ಕಡಿಮೆಯಾಯಿತು. ಇದೇ ಅವಧಿಯಲ್ಲಿ ಕೃಷಿಯೇತರ ವಲಯಗಳು ಖರೀದಿ ಮಾಡಿದ ಕೃಷಿ ಉತ್ಪಾದನೆಗಳ ಬೆಲೆಯಲ್ಲಿ 5.94% ಹೆಚ್ಚಳವಾದರೆ, ಕೃಷಿವಲಯಗಳು ಖರೀದಿಮಾಡಿದ ಕೃಷಿಯೇತರ ಉತ್ಪಾದನೆಗಳ ಬೆಲೆಯಲ್ಲಿ 4.5% ವೃದ್ಧಿಯಾಯಿತು. ಅಂದರೆ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಕೈಗಾರಿಕಾ ಉತ್ಪನ್ನಗಳ ಬೆಲೆಗಿಂತ ಹೆಚ್ಚಿನ ಅಭಿವೃದ್ಧಿಯಾಗಿದೆ. ಹಾಗಾದರೆ ಈ ವೃದ್ಧಿಯ ಲಾಭಯಾರಿಗೆಹೋಯಿತು? ಕೃಷಿಕಾರ್ಮಿಕರ ಪರಿಸ್ಥಿತಿ ಹದಗೆಟ್ಟಿರುವಾಗ ಈ ಲಾಭ ಹಳ್ಳಿಯ ಭೂಮಾಲಕ ವರ್ಗಕ್ಕೆ ಸಿಕ್ಕಿತು ಎಂಬುದು ಸುಸ್ಪಷ್ಟ. ಈ ಲಾಭದ ಪಾಲು ಪಟ್ಟಣಗಳಲ್ಲಿರುವ ಕಾರ್ಮಿಕರಿಗೂ, ನೌಕರರಿಗೂ ಸಿಕ್ಕಿಲ್ಲ. ಏಕೆಂದರೆ 1974-75ರ ನಂತರ ಒಂದೆರಡು ವರ್ಷ ಬಂಡರ್ ಬೆಳೆಯಿಂದಾಗಿ ತಮ್ಮ ಕೃಷಿ ಉತ್ಪನ್ನಗಳಿಗೆ ಸಾಮಾನ್ಯ ರೈತರಿಗೆ ಸಿಗುತ್ತಿದ್ದ ಬೆಲೆಯಲ್ಲಿ ಗಣನೀಯ ಕಡಿತವಾದರೂ ಅದರಿಂದ ಸಾಮಾನ್ಯ ಬಳಕೆದಾರರಿಗೆ (ನಗರದ ಕಾರ್ಮಿಕ ಮತ್ತು ನೌಕರರೂ ಸೇರಿದಂತೆ) ಏನೂ ಪ್ರಯೋಜನವಾಗಲಿಲ್ಲ. ಲಾಭಾಂಶ ಭೂಮಾಲಕರ, ವರ್ತಕರ, ಮಿಲ್‌ಮಾಲೀಕರ ಜೇಬನ್ನೇ ಸೇರಿತು. ಗಮನಿಸಬೇಕಾದ್ದನ್ನೂ ಒಂದು ಅಂಶವಿದೆ. ಭೂಸುಧಾರಣಾ ಕಾನೂನುಗಳು ಪ್ರಾರಂಭವಾದಾಗ ಈ ಕಾನೂನುಗಳಿಂದ ದೇಶದಲ್ಲಿ ಒಟ್ಟು 5 ಕೋಟಿ ಎಕರೆ ಹೆಚ್ಚುವರಿ ಜಮೀನು ಭೂಹೀನರಲ್ಲಿ ಮರುಹಂಚಿಕೆಗೆ ಸಿಗುತ್ತದೆ ಎಂದು ಅಂದಾಜು ಮಾಡಲಾಗಿತ್ತು. ಆದರೆ ಇದುವರೆಗೆ ಸರ್ಕಾರದ ಸ್ವಾಧೀನಕ್ಕೆ ಬಂದದ್ದು ಕೇವಲ 24 ಲಕ್ಷ ಎಕರೆ. ಅದರಲ್ಲೂ ಭೂಹೀನರಲ್ಲಿ ಮರು ಹಂಚಿಕೆಯಾದದ್ದು ಕೇವಲ 13 ಲಕ್ಷ ಎಕರೆ. ಇದಕ್ಕೆ ಯಾರು ಹೊಣೆ? ಬೂರ್ಜ್ವಾ ನಾಯಕರಿಂದ ಶೋಷಕರು ಎಂದು ಅನಿಸಿಕೊಳ್ಳುವ ಸಂಘಟಿತ ಕಾರ್ಮಿಕರೇ ಅಥವಾ ಶೋಷಿತರ ಗುಂಪಿಗೇ ಸೇರಿದವರು ಅನಿಸಿಕೊಳ್ಳುವ ಭೂಮಾಲಕರೇ? ಒಟ್ಟಿನಲ್ಲಿ, ಕಾರ್ಖಾನೆ ಕಾರ್ಮಿಕರ, ನೌಕರರ ನಿಜವೇತನ 1963 ರಿಂದ 1974ರ ನಡುವೆ 5% ಕಮ್ಮಿಯಾಗಿಯೂ, ಕೃಷಿಕಾರ್ಮಿಕರ ವರಮಾನದಲ್ಲಿ ಇನ್ನೂ ಹೆಚ್ಚಿನ ಕಡಿತವಾಗಿಯೂ ದೇಶದ ಪ್ರತಿವ್ಯಕ್ತಿಯ ಸರಾಸರಿ ವರಮಾನ 8%ದಷ್ಟು ಹೆಚ್ಚಿದೆ. ಈ ಹೆಚ್ಚಳ ಯಾರ ಪಾಲಾಯಿತು? ನಿಸ್ಸಂಶಯವಾಗಿ ಹಳ್ಳಿಗಳ ಭೂಮಾಲಕರ ಮತ್ತು ಪಟ್ಟಣಗಳಲ್ಲಿರುವ ಬೂರ್ಜ್ವಾಗಳಿಗೆ ಸೇರಿತು. ಹಾಗಿದ್ದರೆ ಶೋಷಕರು ಯಾರು ಮತ್ತು ಶೋಷಿತರು ಯಾರು?

ವರಮಾನ ತಾರತಮ್ಯಕ್ಕೆ ಕಾರಣ:

ಅಸಂಘಟಿತ ಕಾರ್ಮಿಕರು ಮತ್ತು ಬಡರೈತರಿಗೆ ಹೋಲಿಸಿದರೆ ದೊಡ್ಡ ಕಾರ್ಖಾನೆಗಳ ಸಂಘಟಿತ ಕಾರ್ಮಿಕರು

[6ನೇ ಪುಟ ನೋಡಿ]

ಎರಡು ಎ.ಐ.ಸಿ.ಸಿ. ಅಧಿವೇಶನಗಳ ಭಿನ್ನ ಭಿನ್ನ ನಿಲುವುಗಳು....

[4ನೇ ಪುಟದಿಂದ]

ಪ್ರಭುತ್ವ ಮತ್ತು ಜಾತ್ಯಾತೀತ ಹಾದಿಯಲ್ಲಿ ದೇಶವನ್ನು ಮುಂದುವರಿಸಲಾಗಿದೆ" ಎಂದು ಹೇಳುವುದರ ಜೊತೆಗೆ, ಜನತಾ (ಎಸ್) ಕಾಂಗ್ರೆಸ್ ಮತ್ತು ಅದಕ್ಕಿಂತ ಮುಖ್ಯವಾಗಿ ಎಡಪಕ್ಷಗಳನ್ನು ಖಂಡಿಸಲಾಗಿದೆ. ಎಡಪಕ್ಷಗಳಿಗೆ ಮೀಸಲಿಡಲಾದ ಕಟುಶಬ್ದಗಳು ಇಲ್ಲಿವೆ:

"ಎಡಪಂಥೀಯರೆಂದು ಕರೆದುಕೊಳ್ಳುವ ಕೆಲವು ವ್ಯಕ್ತಿಗಳು ಮತ್ತು ಗುಂಪುಗಳು ಜೋರಾಗಿ ಸದ್ದು ಮಾಡುತ್ತಿದ್ದಾರೆ. ಸರ್ವಾಧಿಕಾರದ ಬಗೆಗಿನ ಅವರ ಗೊಣಗಾಟ ಅವರ ಸರ್ವಾಧಿಕಾರಿ ಸ್ವರೂಪವನ್ನು, ಪ್ರತಿಗಾಮಿ ಗುಂಪುಗಳೊಡನೆ ಸೇರಿರುವುದನ್ನು ಮುಚ್ಚಿಡುವ ವಿಧಾನವಾಗಿದೆ. ದೇಶದ ಮುಖ್ಯವಾಹಿನಿಯಿಂದ ದೂರವಾಗಿ ಪ್ರತಿಗಾಮಿ ಶಕ್ತಿಗಳೊಂದಿಗೆ ಸೇರುವುದು ಅವರ ದುರದೃಷ್ಟವಾಗಿದೆ. ಕಾಂಗ್ರೆಸ್ಸೊಂದೇ ಪ್ರತಿನಿಧಿಸುವ ಪ್ರಜಾಸತ್ತಾತ್ಮಕ ಸಮಾಜವಾದಿ ಚಳುವಳಿಯನ್ನು ಅವರೊಂದಿಗೆ ಒಪ್ಪಿಕೊಳ್ಳಲು ಸಾಧ್ಯವಾಗಿಲ್ಲ."

ಅರವತ್ತೆರಡು ವರ್ಷಗಳ ಹಿಂದೆ ರಷ್ಯಾದಲ್ಲಿ ಸಮಾಜವಾದ ಸ್ಥಾಪಿಸಿದಾಗಿನಿಂದ ಸಾಮ್ರಾಜ್ಯಶಾಹಿಗಳು ಮಾಡುತ್ತಿರುವ ಎಲ್ಲ ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರವೂ ಇಲ್ಲಿದೆ. ದುಡಿಯುವ ಜನರನ್ನು ಶೋಷಕ ವರ್ಗಗಳ ಹಿಡಿತದಿಂದ ಪಾರುಮಾಡಿದ ಹೊಸ ಸಮಾಜ ಮತ್ತು ರಾಜ್ಯ ವ್ಯವಸ್ಥೆ ಅವರ ಪ್ರಕಾರ "ಸರ್ವಾಧಿಕಾರಿಯಾದದ್ದು." ಹಾಗೆಯೇ ದುಡಿಯುವ ಜನರ ಆಶೋತ್ತರಗಳನ್ನು ದಮನಮಾಡಲು ಆಳುವ ವರ್ಗಗಳು ಸ್ಥಾಪಿಸಿದ ಕ್ರೂರ ಸರ್ಕಾರಗಳು "ಪ್ರಜಾಪ್ರಭುತ್ವವಾದಿ." ರಷ್ಯಾದ ಹೊಸ ರಾಜ್ಯವನ್ನು ಮುಳುಗಿಸಲು ಚರ್ಚಿಲ್ ಮತ್ತು ಇತರ ಬೂರ್ಜ್ವಾ ದೇಶಗಳಲ್ಲಿದ್ದ ಅವನಂತಹವರು ಇದೇ ಪರಿಯಲ್ಲಿ ಅರಚಿದ್ದರು. ಜಗತ್ತಿನಾದ್ಯಂತ ಕಮ್ಯುನಿಸ್ಟ್-ವಿರೋಧಿಗಳು ಕೊಟ್ಟ ರಣಕಹಳೆಯೂ ಇದೇ ಆಗಿದೆ. ನಮ್ಮ ದೇಶದಲ್ಲಿನ ಆಳುವ ವರ್ಗಗಳ ಪ್ರಚಾರಕರೂ ಇದನ್ನು ಅನುಸರಿಸಿದ್ದಾರೆ.

ಇತಿಹಾಸದ ಒಂದು ವ್ಯಂಗ್ಯವೆಂದರೆ, 1975ರಲ್ಲಿ ಇಂದಿರಾ ಗಾಂಧಿಯು ದೇಶದ ಮೇಲೆ ತುರ್ತುಪರಿಸ್ಥಿತಿಯನ್ನು ಹೇರಿದಾಗ, ಆಕೆಯು "ರಷ್ಯಾ ಮಾದರಿ ಸರ್ಕಾರ" ವನ್ನು ತರುತ್ತಿದ್ದಾಳೆಂದು ಆಕೆಯನ್ನು ಖಂಡಿಸಲಾಯಿತು. ತುರ್ತುಪರಿಸ್ಥಿತಿ ಹೇರಿದ ಆಕೆಯನ್ನು ಪರಿಷ್ಕರಣವಾದಿಗಳಾದ ಬಲಕಮ್ಯುನಿಸ್ಟರು ಮತ್ತು ಹೊರ ದೇಶದ ಕೆಲವರು ಬೆಂಬಲಿಸಿದರು. ಪ್ರತಿಗಾಮಿಗಳ ಮತ್ತು ಸಾಮ್ರಾಜ್ಯಶಾಹಿಗಳ ವಿರುದ್ಧ ಇಂದಿರಾಗಾಂಧಿಯು ಕ್ರಮ ತೆಗೆದುಕೊಳ್ಳುತ್ತಿದ್ದಾಳೆ ಎಂದು ಪರಿಷ್ಕರಣವಾದಿಗಳು ಹೇಳಿದರು. ಸೋವಿಯತ್ ರಷ್ಯಾವನ್ನಾಗಲೀ ಅಥವ ಬಲಕಮ್ಯುನಿಸ್ಟ್ ಪಕ್ಷವನ್ನಾಗಲೀ ಸರ್ವಾಧಿಕಾರಿ ಎಂದು ಆ ಕಾಲದಲ್ಲಿ ಇಂದಿರಾಗಾಂಧಿ ಖಂಡಿಸಲು ಸಾಧ್ಯವಾಗುತ್ತಿರಲಿಲ್ಲ. ಆಕೆಯು ಫ್ಯಾಸಿಸ್ಟ್ ವಿರೋಧಿ ಎಂದು ಆಗ ಇವರೆಲ್ಲರೂ ಆಕೆಗೆ ಬಣ್ಣ ಕಟ್ಟುತ್ತಿದ್ದರು. ಇಂದಿರಾ ಗಾಂಧಿಯ ಕಾಂಗ್ರೆಸ್ ಪಕ್ಷ ಪ್ರತಿನಿಧಿಸುವ ಸರ್ವಾಧಿಕಾರಿ ಶಕ್ತಿಗಳ ವಿರುದ್ಧದ ಹೋರಾಟವನ್ನು ಇಂದು ಬಲಕಮ್ಯುನಿಸ್ಟ್ ಪಕ್ಷವೂ ಸೇರಿದಂತೆ ದೇಶದ ಎಡ ಚಳುವಳಿಯು ಎತ್ತಿಕೊಂಡಿದೆ. ಆದ್ದರಿಂದ ಇಂದಿರಾ ಕಾಂಗ್ರೆಸ್ ಪಕ್ಷವು ಕಮ್ಯುನಿಸಂ ವಿರೋಧದ ತನ್ನ ಹಳೆಯ ಮಾದರಿಯ ಪ್ರತಿಗಾಮೀ ನೀತಿಗಳಿಗೇ ವಾಪಸ್ಸು ಹೋಗಬೇಕಾಗಿದೆ.

ಕಮ್ಯುನಿಸಂ ವಿರೋಧದ ಬಾವುಟವನ್ನು ಇಂದಿರಾ ಕಾಂಗ್ರೆಸ್ಸಿಗರು ಮಾತ್ರ ಹಿಡಿದಿಲ್ಲ ಎಂಬುದನ್ನು ನಾವು ಗಮನಿಸೋಣ. ರಷ್ಯಾದೇಶದ ಬಾಲಬಡುಕರು ಎಲ್ಲ 'ಅನಿಷ್ಟ'ಗಳಿಗೆ ಕಾರಣಕರ್ತರು ಎಂದು ಪ್ರತಿವಾರವೂ ಖಂಡಿಸುತ್ತಿರುವ ಆರ್. ಎಸ್. ಎಸ್. ನ ಮುಖವಾಣಿ 'ಆರ್ಗನೈಸರ್' ಹೇಳುತ್ತದೆ: ರಷ್ಯಾದ ಬಾಲಬಡುಕರಿಂದ ದೇಶ ಹಾಳಾಗುತ್ತಿದೆ ಎಂದು. ಒಂದು ಕಾಲಕ್ಕೆ ಬಲಕಮ್ಯುನಿಸ್ಟರು ಮಾತ್ರ ರಷ್ಯಾದ ಬಾಲಬಡುಕರು ಎಂದು ಕರೆಸಿಕೊಳ್ಳುತ್ತಿದ್ದರು. ಆದರೆ ಇಂದು, ಬಲಕಮ್ಯುನಿಸ್ಟರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟರು, ಮಧುಲಿಮಯೆ, ಎಚ್. ಎನ್. ಬಹುಗುಣ ಹಾಗೂ ವೈ.ಬಿ. ಚವಾಣರೂ ರಷ್ಯಾದ ಬಾಲಬಡುಕ ಬಣಕ್ಕೆ ಸೇರಿಕೊಂಡಿದ್ದಾರಂತೆ. ಇದು ಆರ್. ಎಸ್. ಎಸ್. ಮುಖವಾಣಿ 'ಆರ್ಗನೈಸರ್' ಪತ್ರಿಕೆಯ ಪ್ರಕಾರ. ಆರ್. ಎಸ್. ಎಸ್. ನವರ ಪ್ರಕಾರ, ಮುರಾರ್ಜಿ ಸರ್ಕಾರ ಉರುಳಲು "ರಷ್ಯಾದೇಶದ ಪಿತೂರಿಯೆ" ಕಾರಣವಂತೆ. ಕಮ್ಯುನಿಸಂ ವಿರೋಧಿಸುವವರು ಈ ಆರ್.ಎಸ್.ಎಸ್. ಕ್ಯಾಂಪಿನಲ್ಲಿಯೂ ಇದ್ದಾರೆ ಇಂದಿರಾ ಕಾಂಗ್ರೆಸ್ಸಿಗರ ಜೊತೆ ಎಂಬುದನ್ನು ಮರೆಯದಿರೋಣ.

ಕಮ್ಯುನಿಸಂ ವಿರೋಧದ ಈ ಸುವ್ವಿ ಹಾಡನ್ನು ಹಾಡಲು ಜನತಾಪಕ್ಷದ 'ವಿಚಾರವಾದಿ' ಅಧ್ಯಕ್ಷ ಚಂದ್ರಶೇಖರ್ ಕೂಡ ಸೇರಿಕೊಳ್ಳುವಂತೆ ಒತ್ತಾಯಿಸಲಾಯಿತು. ಆದರೆ ಜನತಾ ಅಧ್ಯಕ್ಷರು ಮಾರ್ಕ್ಸ್‌ವಾದಿ ಕಮ್ಯುನಿಸ್ಟರ ವಿರುದ್ಧ ಮಾತ್ರ ತನ್ನ ಕಮ್ಯುನಿಸಂ ವಿರೋಧವನ್ನು ತೋರಿಸುವುದಕ್ಕೆ ಸೀಮಿತಗೊಂಡರು. ಕಮ್ಯುನಿಸ್ಟ್ ವಿರೋಧಿ ದೃಷ್ಟಿಕೋಣದಲ್ಲಿ ಸಮಾನ ಅಂಶಗಳಿರುವ ಇಂದಿರಾ ಕಾಂಗ್ರೆಸ್ ಮುಂದೆ ಆರ್. ಎಸ್. ಎಸ್. ಜೊತೆಗೂಡುವುದರ ಸೂಚಕವೆ?

●

ಸಂಘಟಿತ ಕಾರ್ಮಿಕರ ಮುಷ್ಕರ ಮತ್ತು ಬಡಜನತೆ

[5ನೇ ಪುಟದಿಂದ]

ಹಾಗೂ ನೌಕರರ ವರಮಾನ ಹೆಚ್ಚು ಇದೆ ಎಂಬುದು ನಿಜ. ಆದರೆ ವರಮಾನ ಹೆಚ್ಚಿದ್ದ ಮಾತ್ರಕ್ಕೆ ಅವರೂ ಶೋಷಕರು ಎನ್ನಲು ಸಾಧ್ಯವಿಲ್ಲ. ಈ ರೀತಿ ಕಾರ್ಮಿಕರಲ್ಲೇ ವರಮಾನದಲ್ಲಿ ತಾರತಮ್ಯ ಇರಲು ಒಂದು ಕಾರಣ- ಆಧುನಿಕ ಕಾರ್ಖಾನೆಗಳಲ್ಲಿ ಉಪಯೋಗಿಸಲ್ಪಡುವ ಶ್ರಮದ ಉತ್ಪಾದಕ ಶಕ್ತಿ ಹೆಚ್ಚಿರುತ್ತದೆ. ಉದಾಹರಣೆಗೆ ಸ್ವಂತ ಉದ್ಯೋಗ ಮಾಡುವ ಚಮ್ಮಾರ ಒಂದು ದಿನದಲ್ಲಿ ಒಂದು ಜೊತೆ ಚಪ್ಪಲಿ ಹೊಲಿದರೆ ಬಾಟಾ ಕಂಪನಿಯಲ್ಲಿ ಕೆಲಸಮಾಡುವ ಕಾರ್ಮಿಕ ದಿನಕ್ಕೆ 10 ಜೊತೆ ಚಪ್ಪಲಿ ತಯಾರಿಸುತ್ತಾನೆ. ಅಂದರೆ ಸ್ವಂತ ಉದ್ಯೋಗ ಮಾಡುವವನಿಗಿಂತ 10 ಪಟ್ಟು ಹೆಚ್ಚು ಉತ್ಪಾದನೆ ಮಾಡುತ್ತಾನೆ. ಇದೇ ಅವರಿಬ್ಬರ ವರಮಾನದಲ್ಲಿರುವ ಅಂತರಕ್ಕೆ ಕಾರಣ. ಆದರೆ ಇಂತಹ ಆಧುನಿಕ ಕಾರ್ಖಾನೆಗಳನ್ನು ಎಲ್ಲ ಬಡವರಿಗೂ ಕೆಲಸ ಸಿಗುವಂತೆ ಸ್ಥಾಪಿಸುವುದು ದೊಡ್ಡ ಸಂಖ್ಯೆಯಲ್ಲಿ ಭಾರತದಂತಹ ಬಡದೇಶದಲ್ಲಿ ಬಂಡವಾಳಶಾಹೀ ದಾರಿಯಲ್ಲಿ ಹೋದರೆ ಸಾಧ್ಯವಿಲ್ಲ. ಕೇವಲ 'ಲಾಭಕ್ಕಾಗಿ ಉತ್ಪಾದನೆ' ಎನ್ನುವ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಕೇವಲ ಕೆಲವು ಕಾರ್ಮಿಕರಿಗೆ ಕೆಲಸ ಕೊಡಿಸಬಹುದಾದ ಕೆಲವೇ ಕಾರ್ಖಾನೆಗಳು ಸ್ಥಾಪಿತವಾಗಿ ದೇಶದ ಬಹುಸಂಖ್ಯಾತ ಬಡಜನತೆ ದಟ್ಟದಾರಿದ್ರ್ಯದಲ್ಲೇ ಉಳಿಯುವಂತಾಯಿತು. ಮಾತ್ರವಲ್ಲ ವೇತನಗಳ ನಡುವಣ ಅಂತರ ಹೆಚ್ಚುವಂತಾಗಿದೆ. ಈ ರೀತಿಯಾಗಲು ಸಂಘಟಿತ ಕಾರ್ಮಿಕರು ಕಾರಣರಲ್ಲ. ಈ ಪರಿಸ್ಥಿತಿಯಿಂದ ಅವರಿಗೆ ಲಾಭವೂ ಇಲ್ಲ. ನಿಜವಾಗಿ, ಬೆಳೆಯುತ್ತಿರುವ ನಿರುದ್ಯೋಗ ಅವರ ಜೀವನಮಟ್ಟದ ಭದ್ರತೆಗೂ ಕುತ್ತು ತಂದಿದೆ. ಆದ್ದರಿಂದ ಸಂಘಟಿತ-ಅಸಂಘಟಿತ ಕಾರ್ಮಿಕರ ವೇತನದಲ್ಲಿರುವ ಅಂತರಕ್ಕೆ, ಹೆಚ್ಚುತ್ತಿರುವ ಬಡತನಕ್ಕೆ, ನಿರುದ್ಯೋಗಕ್ಕೆ ದೇಶ ಹಿಡಿದಿರುವ ಬಂಡವಾಳಶಾಹೀ ಮಾರ್ಗವೇ ಕಾರಣ. ಇದಲ್ಲದೆ ಬಂಡವಾಳಶಾಹೀ ಪದ್ಧತಿ ಅದರಲ್ಲೂ ಈಗಿರುವ ಗುತ್ತೇದಾರಿ ಬಂಡವಾಳಶಾಹೀ ಪದ್ಧತಿ ಮುಂದುವರಿಯಬೇಕಾದರೆ ಸಮಾಜದಲ್ಲಿ ನಿರುದ್ಯೋಗಿಗಳಿರಬೇಕು ಮಾತ್ರವಲ್ಲ, ಕೇವಲ ಹೇಗಾದರೂ ದಿನನೂಕುವಷ್ಟು, ಜೀವ ಹಿಡಿದಿಟ್ಟುಕೊಳ್ಳಲು ಮಾತ್ರ ಸಾಕಾಗುವಷ್ಟು ಕೂಲಿ ಪಡೆಯುವವರ ಸಂಖ್ಯೆಯೂ ಸಾಕಷ್ಟಿರಬೇಕಾಗುತ್ತದೆ. ಹೀಗಿದ್ದಾಗ ಮಾತ್ರ ಬಂಡವಾಳಶಾಹೀ ಬೆಳವಣಿಗೆ ಸಾಧ್ಯ. ಗುತ್ತೇದಾರಿ ಬಂಡವಾಳಗಾರರು ಪಡೆಯುವ ಅತೀ ಹೆಚ್ಚು ಲಾಭ (super profit)ದ ಹೊರೆಯನ್ನು ಅವರು ತಮ್ಮ ಕಾರ್ಮಿಕರ ತಲೆಯ ಮೇಲೇರಿಸಲು ಪ್ರಯತ್ನ ಮಾಡುತ್ತಾರೆ. ಕಾರ್ಮಿಕರು ಅದನ್ನು ಬಲವಾಗಿ ವಿರೋಧಿಸುವುದು ಸಾಧ್ಯವಾದರೆ ಅದನ್ನು ಸಣ್ಣ ಉದ್ಯಮಗಳ ಕಾರ್ಮಿಕರು, ಸಣ್ಣ ಬಂಡವಾಳಗಾರರು ಮತ್ತು ಸ್ವಂತ ಉದ್ಯೋಗಿಗಳ ತಲೆಮೇಲೆ ಹೊರಿಸಲು ಆ ಗುತ್ತೇದಾರಿಗಳು ಪ್ರಯತ್ನಿಸುತ್ತಾರೆ. ಅಂದರೆ ಒಟ್ಟಿನಲ್ಲಿ ಈ ಗುತ್ತೇದಾರಿ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಸಂಘಟಿತ ಕಾರ್ಮಿಕರ ವೇತನ, ಅಸಂಘಟಿತರಿಗಿಂತ ಹೆಚ್ಚಿರಲು ಕಾರಣ ಬಂಡವಾಳಶಾಹಿಗಳು ತಮ್ಮ ಲಾಭದಲ್ಲಿ ಅವರಿಗೂ ಪಾಲು ಕೊಟ್ಟಿದ್ದಾರೆ ಎಂಬುದಲ್ಲ. ಬದಲಾಗಿ ಬೇರೆ ಕಾರ್ಮಿಕರ ಮತ್ತು ಬಡವರ ಶೋಷಣೆ ಇನ್ನೂ ತೀವ್ರವಾಗಿದೆ ಎಂಬುದೇ ಆಗಿದೆ. ಮೊದಲು ದೊಡ್ಡ ಕಾರ್ಖಾನೆ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರೂ 50 ರೂ. ಗಳಿಸುತ್ತಿದ್ದರು ಎಂದಿಟ್ಟುಕೊಂಡರೆ ಈಗ ಸಂಘಟಿತ ಕಾರ್ಮಿಕರ ವೇತನ 50 ರೂ. ಗೇ ಉಳಿದು ಅಸಂಘಟಿತರ ವರಮಾನ 30 ರೂ. ಗೆ ಇಳಿದಿದೆ. 20 ರೂ. ಬಂಡವಾಳಶಾಹಿಗಳ, ಭೂಮಾಲಕರ ಜೇಬು ಸೇರಿದೆ. ಮತ್ತು ಅಸಂಘಟಿತರ ವರಮಾನದಲ್ಲಾದ ಕಡಿತವನ್ನೇ ನೆಪಮಾಡಿಕೊಂಡು ಸಂಘಟಿತ ಕಾರ್ಮಿಕರ ವೇತನವನ್ನು ಈಗೀಗಲೇ ಸ್ಥಗಿತಗೊಳಿಸಲಾಗಿದೆ.

ಸಂಘಟಿತರ ವಿರುದ್ಧ ಅಪಪ್ರಚಾರ ಏಕೆ?

ಸಂಘಟಿತ ಕಾರ್ಮಿಕರ ವಿರುದ್ಧ ಇಷ್ಟೊಂದು ಅಪಪ್ರಚಾರ ಯಾಕೆ ನಡೆಯುತ್ತಿದೆಯೆಂಬುದನ್ನು ಗಮನಿಸಬೇಕು ಬಂಡವಾಳಶಾಹೀ ವ್ಯವಸ್ಥೆ ನಿರಾತಂಕವಾಗಿ ಮುಂದುವರಿಯಲು ಇರುವ ದೊಡ್ಡ ಅಡ್ಡಿಯೆಂದರೆ ಅದೇ ವ್ಯವಸ್ಥೆ ಹುಟ್ಟಿಸಿದ ಕಾರ್ಮಿಕ ವರ್ಗ. ಕಾರ್ಮಿಕ ವರ್ಗದ ಸಂಘಟನೆ ಬಲಶಾಲಿಯಾದಂತೆಲ್ಲಾ ಬಂಡವಾಳಶಾಹಿ ವ್ಯವಸ್ಥೆಗಿರುವ ಅಪಾಯವೂ ಹೆಚ್ಚುತ್ತಾ ಹೋಗುತ್ತದೆ. ಈ ವ್ಯವಸ್ಥೆಯಲ್ಲಿ ಹೆಚ್ಚುತ್ತಿರುವ ಶೋಷಣೆಗೆ ಒಳಗಾದ ಬಹುಸಂಖ್ಯಾತ ಬಡವರ ನಾಯಕತ್ವ ವಹಿಸಿ ಈ ಶೋಷಣೆಯ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಶಕ್ತಿಯಿರುವುದು ಸಂಘಟಿತ ಕಾರ್ಮಿಕ ವರ್ಗಕ್ಕೆ ಮಾತ್ರ. ಆದ್ದರಿಂದ ಅವರನ್ನೇ ಶೋಷಕರು ಅಂತ ಕರೆದು ಬಹುಸಂಖ್ಯಾತ ಶ್ರಮಜೀವಿ ಬಡಜನರಿಂದ ಅವರನ್ನು ಬೇರ್ಪಡಿಸಲು ಸಾಧ್ಯವಾದರೆ, ಅವರ ಸಂಬಳ ಸೌಲಭ್ಯಗಳ ಮೇಲೆ ದಾಳಿಮಾಡಿ ಯಶಸ್ಸು ಗಳಿಸಲು ಸಾಧ್ಯವಾದರೆ ಆಮೇಲೆ ಶ್ರಮಜೀವಿವರ್ಗಗಳ ಇತರರ ವರಮಾನದ ಮೇಲೂ ದಾಳಿ ನಡೆಸಿ ಅವರನ್ನು ಸುಮ್ಮನಾಗಿಸಲು ಬಹಳ ಸಮಯ ಹಿಡಿಸುವುದಿಲ್ಲ.

ಸಂಘಟಿತ ಕಾರ್ಮಿಕರು ಈ ಅಪಪ್ರಚಾರವನ್ನು ಹೆದರದೆ ಬಲವಾಗಿ ಎದುರಿಸಬೇಕು. ತಮ್ಮ ಬಲವಾದ ಸಂಘಟನೆಗಳ ಮೂಲಕವೂ ಕಳೆದ ಒಂದು ಶತಮಾನದಲ್ಲಿ ಜೀವನ ಮಟ್ಟದಲ್ಲಿ ಗಣನೀಯ ಪ್ರಗತಿ ಸಾಧಿಸಲು ಸಾಧ್ಯವಾಗದಂತೆ ಮಾಡಿದ ಈಗಿನ ಆರ್ಥಿಕ ವ್ಯವಸ್ಥೆ ಬಗ್ಗೆ ತೀವ್ರವಾಗಿ ಯೋಚಿಸಬೇಕು. ತಮ್ಮ ಹೋರಾಟಗಳನ್ನು ಕೇವಲ ಸಂಬಳ ಅಥವಾ ಇತರ ಸೌಲಭ್ಯಗಳಿಗೇ ಸೀಮಿತಗೊಳಿಸುವುದರ ಅಪಾಯವನ್ನು ಈಗ ಅವರು ಮನಗಾಣಬೇಕು. ಆದ್ದರಿಂದ ತಮ್ಮ ಸಂಘಟನಾ ಬಲವನ್ನು ಮತ್ತು ಅನುಭವವನ್ನು ಅಸಂಘಟಿತರ ಸಂಘಟನೆಗಾಗಿಯೂ, ಅವರ ಹೋರಾಟಗಳ ಬೆಂಬಲಕ್ಕಾಗಿಯೂ ಉಪಯೋಗಿಸಬೇಕು. ಪರಸ್ಪರ ಒಬ್ಬರು ಇನ್ನೊಬ್ಬರ ಹೋರಾಟಗಳಲ್ಲಿ ಪಾಲುಗೊಳ್ಳುವಂತಾಗಬೇಕು. ಈ ರೀತಿ ಸಂಘಟಿತ ಅಸಂಘಟಿತರ ನಡುವೆ ಒಡಕು ಉಂಟುಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹವಣಿಸುವ ಆಳುವ ವರ್ಗಗಳಿಗೆ ಸರಿಯಾದ ಉತ್ತರವನ್ನು ಕೊಡಬೇಕು.

—ಕೆ. ವೇದ

ಮೈಸೂರು ರೇಷ್ಮೆ ಕೇಂದ್ರ: ನೌಕರರ ಮೇಲೆ ಪೋಲೀಸ್ ಲಾಠಿ

ಮೈಸೂರು ನಗರದ ದಕ್ಷಿಣ ವಿಭಾಗದಲ್ಲಿರುವ ಕೇಂದ್ರ ರೇಷ್ಮೆ ಸಂಶೋಧನಾಲಯ ಮತ್ತು ಶಿಕ್ಷಣ ಕೇಂದ್ರದಲ್ಲಿ ಕೆಲಸಮಾಡುತ್ತಿರುವ ಕಾರ್ಮಿಕರ ಮೇಲೆ ಪೋಲೀಸರು ವಿನಾಕಾರಣ ಸೆ. 19 ರಂದು ಲಾಠಿ ಪ್ರಹಾರ ಮಾಡಿದರೆಂದು ಕೇಂದ್ರ ರೇಷ್ಮೆ ಸಂಶೋಧನಾ ಮತ್ತು ಶಿಕ್ಷಣಾಲಯ ನೌಕರರ ಸಂಘ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಪೋಲೀಸ್ ಲಾಠಿ ಪ್ರಹಾರಕ್ಕೆ ಕೇಂದ್ರದ ನಿರ್ದೇಶಕರು ಮತ್ತು ಉಪನಿರ್ದೇಶಕರು ಇತ್ತ ಆದೇಶವೇ ಕಾರಣವೆಂದು ಪ್ರಕಟಣೆಯಲ್ಲಿ ದೂರಲಾಗಿದೆ. ಸೆ. 19 ರಿಂದ ಕೇಂದ್ರಕ್ಕೆ ಬೀಗಮುದ್ರೆ ಹಾಕಿಸಿರುವ ಆಡಳಿತ ವರ್ಗವು ಕಾರ್ಮಿಕರಿಗೆ ಅನ್ಯಾಯ ಮಾಡಿದೆ ಎಂದೂ ಸಹ ಪ್ರಕಟಣೆ ಹೇಳಿದೆ.

ನೌಕರರ ಸಂಘದ ಅಧ್ಯಕ್ಷರಾದ ಕಾಂ. ಎಂ. ಎನ್. ಉಗ್ರಪ್ಪನವರು ಪೋಲೀಸರ ಮತ್ತು ಸಂಸ್ಥೆಯ ನಿರ್ದೇಶಕರ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ, ಎಲ್ಲ ಕೆಲಸಗಾರರನ್ನು ಕೂಡಲೇ ಬೇಷರತ್ತಾಗಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದಾರೆ.

●

ಜಿಲ್ಲಾಧಿಕಾರಿ ಕಚೇರಿ ಮುಂದೆ ರೈತಸಂಘದ ಸತ್ಯಾಗ್ರಹ

ಬೆಂಗಳೂರು ದಕ್ಷಿಣ ತಾಲ್ಲೋಕಿಗೆ ಸೇರಿದ ತಾತಗುಣಿ ಎಸ್ಟೇಟ್ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಜಿಲ್ಲಾ ರೈತ ಸಂಘವು ಅಕ್ಟೋಬರ್ 4 ರಂದು ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸುವುದೆಂದು ರೈತಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಸತ್ಯಾಗ್ರಹದ ನಾಯಕತ್ವವನ್ನು ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಮುಗುವಾಳಪ್ಪ ಅವರು ವಹಿಸುವರು.

●

ಗುಲ್ಬರ್ಗದಲ್ಲಿ ಎಸ್. ಎಫ್. ಐ. ಬೇಡಿಕೆ ದಿನಾಚರಣೆ

ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಗುಲ್ಬರ್ಗ ಜಿಲ್ಲಾ ಘಟಕವು ಇತ್ತೀಚೆಗೆ ಬೇಡಿಕೆಗಳ ದಿನಾಚರಣೆಯನ್ನು ಆಚರಿಸಿತು. ಎಸ್. ಎಫ್. ಐ. ನ ಸದಸ್ಯರು ಮತ್ತು ಹಿತೈಷಿಗಳು ಗುಲ್ಬರ್ಗ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಮ್ಮ ಬೇಡಿಕೆಗಳ ಬೆಂಬಲಾರ್ಥ ಘೋಷಣೆಗಳನ್ನು ಕೂಗಿದರು.

ವಿದ್ಯಾರ್ಥಿಗಳಿಂದ ತಮ್ಮ ಬೇಡಿಕೆಗಳ ಪರವಾಗಿ ಸಂಗ್ರಹಿಸಿದ್ದ ಸಹಿಸಂಗ್ರಹಣೆಯ ಮನವಿಪತ್ರವೊಂದನ್ನು ಎಸ್. ಎಫ್. ಐ. ನಾಯಕರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು.

ಎಸ್. ಎಫ್. ಐ. ನಾಯಕತ್ವದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಮೆರವಣಿಗೆ ಮತ್ತು ಕಾರ್ಯಕ್ರಮ ಗುಲ್ಬರ್ಗ ನಗರದಲ್ಲಿ ನಡೆದದ್ದು ಇದೇ ಪ್ರಥಮ ಸಲವೆಂದು ಹೇಳಲಾಗಿದೆ.

ಸುರಪುರ ಮತ್ತು ಶಹಬಾದ್‌ನಲ್ಲೂ

ಎಸ್. ಎಫ್. ಐ. ಕರೆಯ ಮೇರೆಗೆ ಗುಲ್ಬರ್ಗ ಜಿಲ್ಲೆಯ ಸುರಪುರ ಮತ್ತು ಶಹಬಾದ್‌ನಲ್ಲೂ ಬೇಡಿಕೆ ದಿನಾಚರಣೆಯನ್ನು ಎಸ್. ಎಫ್. ಐ. ಸದಸ್ಯರು ಮತ್ತು ಹಿತೈಷಿಗಳು ಆಚರಿಸಿದರೆಂದು ತಡವಾಗಿ ಬಂದ ವರದಿಗಳು ತಿಳಿಸಿವೆ. ●

ಬೀಡಿ ಕೈಗಾರಿಕೆಯಲ್ಲಿ ಕಪ್ಪುಹಣ

ಬೀಡಿಕೈಗಾರಿಕೆಯಲ್ಲಿ ಕಪ್ಪುಹಣ ಅಧಿಕವಾಗಿ ಬೆಳೆಯುತ್ತಿದೆ. ಕೈಗಾರಿಕಾ ಮಾಲೀಕರು ಎಲೆ, ಹೊಗೆಸೊಪ್ಪು ಇತ್ಯಾದಿ ಹೆಸರಿನಲ್ಲಿ ಕೆಲಸಗಾರರ ಕೂಲಿಯಲ್ಲಿ ಕಡಿತಮಾಡುತ್ತಿದ್ದಾರೆ. ಆದರೆ ಈ ಕಡಿತವನ್ನು ತಮ್ಮ ಲೆಕ್ಕಪತ್ರಗಳಲ್ಲಿ ತೋರಿಸಿಕೊಳ್ಳುತ್ತಿಲ್ಲ. ಉದಾಹರಣೆಗೆ ಕೋಲಾರ ನಗರದ ಜ್ಯೋತಿ ಹೋಂ ಇಂಡಸ್ಟ್ರೀಸ್ ಮಾಲೀಕರು (ಗಣೇಶ ಬೀಡಿಗಳು) ಸುಮಾರು 1,000 ಕೆಲಸಗಾರರನ್ನು ದುಡಿಸಿಕೊಳ್ಳುತ್ತಿದ್ದಾರೆ. ಪ್ರತಿ ವರ್ಷ ಈ ಬಡ ಕಾರ್ಮಿಕರಿಂದ ಸುಮಾರು 5 ರಿಂದ 6 ಲಕ್ಷ ರೂ. ಗಳವರೆಗೆ ಎಲೆ ಮತ್ತು ಹೊಗೆಸೊಪ್ಪಿನ ನಷ್ಟದ ಹೆಸರಿನಲ್ಲಿ ಕೆಲಸಗಾರರಿಂದ ದೋಚುತ್ತಾರೆ. ಇದರಂತೆ 1972 ರಿಂದ ಏಳು ವರ್ಷಗಳಲ್ಲಿ ಸುಮಾರು 40 ಲಕ್ಷಕ್ಕಿಂತ ಹೆಚ್ಚು ಹಣ ದೋಚಿದ್ದಾರೆ. ಈ ಬಗ್ಗೆ ಯಾವ ರೀತಿಯ ಲೆಕ್ಕ ತೋರಿಸಿಲ್ಲ. ಇದು ಎಲ್ಲಾ ರೀತಿಯ ತೆರಿಗೆಗಳಿಂದ ಮುಕ್ತವಾಗಿದೆ.

ಇದೇ ಮಾಲೀಕರು ಕೋಲಾರ, ಬೆಂಗಳೂರು, ತುಮಕೂರು, ಮೈಸೂರು ಮತ್ತು ಇತರ ಕಡೆಗಳಲ್ಲಿ ಸಾವಿರಾರು ಕಾರ್ಮಿಕರಿಂದ ದುಡಿಸಿಕೊಳ್ಳುತ್ತಿದ್ದಾರೆ. ಬಡಕಾರ್ಮಿಕರಿಂದ ಕೋಟ್ಯಾಂತರ ರೂ. ಗಳನ್ನು ಸುಲಿಗೆ ಮಾಡಿ ದಾಖಲೆ ಇಲ್ಲದೆ ನುಂಗಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಈ ಕಪ್ಪುಹಣ ಕಾಣಿಸುತ್ತಿಲ್ಲ.

○

ಕುಂದಾಪುರದಲ್ಲಿ ಎಸ್.ಎಫ್.ಐ. ಬೇಡಿಕೆ ದಿನಾಚರಣೆ

ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಕೇಂದ್ರ ಕಾರ್ಯಕಾರಿ ಸಮಿತಿಯ ಕರೆಯ ಮೇರೆಗೆ ಕುಂದಾಪುರದ ಎಸ್. ಎಫ್.ಐ. ಘಟಕವು ಸೆಪ್ಟೆಂಬರ್ 14 ರಂದು ಬೇಡಿಕೆ ದಿನವನ್ನು ಆಚರಿಸಿತು. ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳು ಇದರಲ್ಲಿ ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಸ್ಥಳೀಯ ಘಟಕದ ಅಧ್ಯಕ್ಷರಾದ ಕಾಂ. ಗಣೇಶ್ ಕಾರಂತ್ ವಹಿಸಿದ್ದರು. ಎಸ್. ಎಫ್. ಐ. ನ 20 ಬೇಡಿಕೆಗಳನ್ನು ದ. ಕ. ಜಿಲ್ಲಾ ಎಸ್. ಎಫ್. ಐ. ಉಪಾಧ್ಯಕ್ಷ ಆರ್. ಜಯಕುಮಾರ್ ವಿವರಿಸಿದರು. ○

ಆರ್ಥಿಕ ಸಮೀಕ್ಷೆ:

[3ನೇ ಪುಟದಿಂದ]

ಉತ್ಪಾದನಾ ವಿಧಾನ (Mode of production) ವನ್ನು ನಿರ್ಧರಿಸುತ್ತದೆ. ಉತ್ಪಾದನಾ ವಿಧಾನದಲ್ಲಿ ಉತ್ಪಾದನಾ ಶಕ್ತಿಗಳಿಗನುಗುಣವಾಗಿ ಉತ್ಪಾದನಾ ಸಂಬಂಧವಿದ್ದರೆ ಉತ್ಪಾದನಾ ಶಕ್ತಿಗಳು ತುಂಬು ಸಾಮರ್ಥ್ಯದಿಂದ ಪ್ರವಹಿಸಿ, ಉತ್ಪಾದನೆಯಲ್ಲಿ ತೊಡಗಿರುವ ಜನಕೋಟಿಯ ಸರ್ವತೋಮುಖವಾದ ಅಭಿವೃದ್ಧಿಯು ಸಾಧ್ಯವಾಗುವುದು. ಉತ್ಪಾದನಾ ಶಕ್ತಿಗಳು ಬದಲಾವಣೆ ಹೊಂದುತ್ತಲೇ ಇರುವವು. ಅದಕ್ಕನುಗುಣವಾಗಿ ಉತ್ಪಾದನಾ ವಿಧಾನದಲ್ಲಿಯೂ ಬದಲಾವಣೆ ಆಗಲೇಬೇಕಾಗುವುದು. ಉತ್ಪಾದನಾ ವಿಧಾನದಲ್ಲಿ ಬದಲಾವಣೆ ಆಗುವುದೆಂದರೆ, ಉತ್ಪಾದನಾ ಸಂಬಂಧದಲ್ಲಿ ಮತ್ತು ಸಮಸ್ತ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಆಚಾರ ವಿಚಾರಗಳಲ್ಲಿ ಹಾಗೂ ಸಂಘ ಸಂಸ್ಥೆಗಳಲ್ಲಿ ಬದಲಾವಣೆಗಳಾಗುವುದು. ಸಮಸ್ತ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಯನ್ನು ಪುನರ್ ರಚಿಸುವುದು. ಸಮಾಜದ ಬೆಳವಣಿಗೆಯ ವಿವಿಧ ಹಂತಗಳಲ್ಲಿ, ವಿವಿಧ ಉತ್ಪಾದನಾ ವಿಧಾನಗಳನ್ನು ಜನರು ಬಳಸುತ್ತಾ ಬಂದರು. ಅಂದರೆ, ಜನರ ಜೀವನ ವಿಧಾನಗಳು ಬದಲಾವಣೆಯಾಗುತ್ತಾ ಬಂದವು. ಉತ್ಪಾದನಾ ಶಕ್ತಿಗಳಿಗನುಗುಣವಾಗಿ, ಕಾಲಕ್ರಮೇಣ ಬೆಳೆದು ಬಂದ ಬದಲಾದ ಉತ್ಪಾದನಾ ಸಂಬಂಧಗಳು ಉತ್ಪಾದನಾ ವಿಧಾನಗಳ. ಜನರ ಜೀವನ ವಿಧಾನಗಳ, ಸಾಮಾಜಿಕ ವ್ಯವಸ್ಥೆಗಳ ವಿಕಾಸದ ಇತಿಹಾಸವೇ ಆಗಿದೆ. ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗಲ್ಸ್ ಅವರು ಹತ್ತೊಂಬತ್ತನೇ ಶತಮಾನದ ಮಧ್ಯಕಾಲದಲ್ಲಿ ಯುರೋಪಿನ ಸಾಮಾಜಿಕ ವಿಕಾಸದ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿ, ಮಾನವ ಸಮಾಜವು ಸ್ಪಷ್ಟವಾಗಿ ಪ್ರಾಚೀನ ಸಮುದಾಯ ಪದ್ಧತಿ, ದಾಸ್ಯ ಪದ್ಧತಿ ಪಾಳೆಯಗಾರಿ ಪದ್ಧತಿಗಳನ್ನು ದಾಟಿ ಬಂದು, ಬಂಡವಾಳಶಾಹಿ ಪದ್ಧತಿಗೆ ಬಂದು ತಲುಪಿದುದನ್ನೂ, ಮುಂದೆ ಅದು ಸಮಾಜವಾದಿ ಹಾಗೂ ಸಮತಾವಾದಿ ಪದ್ಧತಿಯತ್ತ ಮುಂದುವರಿಯುವುದೆಂದು ಜಗತ್ತಿಗೆ ತಿಳಿಯಪಡಿಸಿದರು. ಬದಲಾಗುತ್ತಿರುವ ಉತ್ಪಾದನಾ ಶಕ್ತಿಗಳಿಗನುಗುಣವಾಗಿ ಉತ್ಪಾದನಾ ಸಂಬಂಧಗಳನ್ನು ಪುನರ್ ರಚಿಸುವ ಯುಗಪರಿವರ್ತನೆಯ ಕಾರ್ಯಗಳನ್ನು ಉತ್ಪಾದನೆಯಲ್ಲಿ ನಿರತರಾಗಿರುವ ದುಡಿಯುವ ಜನಕೋಟಿಯೇ ನೆರವೇರಿಸುವುದೆಂದು ತೋರ್ಪಡಿಸಿದರು. ಜನರು ತಾವೇ ಸೃಷ್ಟಿಸಿದ ಉತ್ಪಾದನಾ ಶಕ್ತಿಗಳೂ ಉತ್ಪಾದನಾ ಮಾಧ್ಯಮಗಳೂ ಸಮಾಜದ ಕೆಲವೇ ಜನರ ಖಾಸಗೀ ಆಸ್ತಿಗಳಾಗಿ ಪರಿವರ್ತಿತಗೊಳ್ಳುವುದನ್ನೂ, ತಮ್ಮ ದುಡಿಮೆಯ ಬಹುಪಾಲು ಪ್ರತಿಫಲವು ಇವರ ಬೊಕ್ಕಸಕ್ಕೇ ಸೇರುವುದನ್ನು ಮತ್ತು ಉತ್ಪಾದನೆಯಲ್ಲಿ ತಮ್ಮನ್ನು ಕೂಲಿಗಳನ್ನಾಗಿ ದುಡಿಸಿಕೊಂಡು ಮಾರಾಟದ ಸರಕುಗಳಂತೆ ಪರಿಗಣಿಸುವುದನ್ನೂ ಸಂಘಟಿತರಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ಪ್ರತಿಭಟಿಸುತ್ತಾ ತಮ್ಮನ್ನೂ ತಮ್ಮ ಉತ್ಪಾದನಾ ಶಕ್ತಿಗಳನ್ನೂ ಅಂತಹ ಅಸ್ವಾಭಾವಿಕ ಬಂಧನಗಳಿಂದ ಬಲಾತ್ಕಾರವಾಗಿ ವಿಮೋಚನೆಗೊಳಿಸುತ್ತಾ ಬಂದಿರುವ ಸಾಮಾಜಿಕ ಕ್ರಾಂತಿಗಳ ಇತಿಹಾಸವನ್ನು ಕಾರ್ಲ್‌ಮಾರ್ಕ್ಸ್ ಸಾದರ ಪಡಿಸಿದರು.

ದಾಸ್ಯ ಪದ್ಧತಿಯಲ್ಲಿ ಧನಿಗಳು ಗುಲಾಮರ ಸಂಖ್ಯೆಯು ಹೆಚ್ಚಾಗುತ್ತಿದೆ ಎಂದು ಮರುಗುತ್ತಿದ್ದರು. ಪಾಳೆಯಗಾರಿ ಪದ್ಧತಿಯಲ್ಲಿ ಪಾಳೆಯಗಾರರು ಜೀತದಾಳುಗಳ ಸಂಖ್ಯೆಯು ಹೆಚ್ಚುತ್ತಿದೆ ಎಂದು ಹೆದರುತ್ತಿದ್ದರು. ಆ ಸಾಮಾಜಿಕ ವ್ಯವಸ್ಥೆಯ ಅಂತಿಮ ಕಾಲದಲ್ಲಿ, ಮಾಲ್ಥಸ್ ಎಂಬ ಆಂಗ್ಲ ಅರ್ಥಶಾಸ್ತ್ರಜ್ಞನು ಪ್ರಪಂಚದಲ್ಲಿ ಜನಸಂಖ್ಯೆಯು ಜೀವನಾವಶ್ಯಕ ವಸ್ತುಗಳ ಉತ್ಪಾದನೆಯನ್ನು ಮೀರಿ ಹೆಚ್ಚುತ್ತಿರುವುದರಿಂದ ನಿಸರ್ಗದ ಕೋಪಶಾಪಗಳಿಂದ ರೋಗರುಜಿನಗಳಿಂದ ಪ್ರಪಂಚದ ಜನಸಂಖ್ಯೆಯು ನಿಯಂತ್ರಣವಾಗುವುದೆಂದು ಪಾಳೆಯಗಾರರನ್ನು ಸಮಾಧಾನ ಪಡಿಸಿದನು. ಆದರೆ, ಮುಂದೆ ಉದಯೋನ್ಮುಖ ಬಂಡವಾಳಶಾಹಿಗಳೂ ಕೈಗಾರಿಕಾ ಕಾರ್ಮಿಕರೂ ಒಗ್ಗಟ್ಟಾಗಿ ಪಾಳೆಯಗಾರಿ ಪದ್ಧತಿಯನ್ನು ನಿರ್ನಾಮಗೊಳಿಸಿ ಬಂಡವಾಳಶಾಹಿ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸಿದಾಗ, ಜನಕೋಟಿಯ ಸಂಖ್ಯೆಯೂ ಉತ್ಪಾದನಾ ಶಕ್ತಿಯೂ ಅತ್ಯದ್ಭುತವಾಗಿ ಹೆಚ್ಚಿದವು. ಮಾಲ್ಥಸ್‌ನ ಸಿದ್ಧಾಂತವು ಸುಳ್ಳಾಯಿತು. ಪುನಃ ಬಂಡವಾಳಶಾಹಿ ಸಮಾಜ ವ್ಯವಸ್ಥೆಯು ಅವಸಾನ ಸ್ಥಿತಿಯಲ್ಲಿರುವಾಗ, ಸಮಾಜವಾದಿ ವ್ಯವಸ್ಥೆಯು ಜನಸಂಖ್ಯೆಯ ಹೆಚ್ಚಳದ ವಾದವನ್ನು ಹುಸಿಮಾಡುತ್ತಿರುವಾಗ, ಕೂಲಿಕಾರರ ಸಂಖ್ಯೆ ಹೆಚ್ಚಾಯಿತೆಂದು ಬಂಡವಾಳಗಾರರೂ ಅವರ ಅಭಿನವ ಮಾಲ್ಥಸ್‌ರೂ ಬೊಬ್ಬಿಡುತ್ತಿದ್ದಾರೆ! ಅವರ ಬೊಬ್ಬಾಟದಲ್ಲಿ ದುಡಿಯುವ ಜನರಿಂದ ತಮ್ಮ ಪತನವು ಸನ್ನಿಹಿತವಾಗುತ್ತಿರುವುದರ ಕುರಿತು ಭಯಂಕರ ಭಯ ಅಡಗಿದೆ!

ಸಂಪತ್ತಿನ ಸೃಷ್ಟಿಕರ್ತರಾದ ಮತ್ತು ಯುಗ ಪರಿವರ್ತಕರಾದ ದುಡಿಯುವ ಜನರು, ಜನಸಂಖ್ಯೆಯ ಹೆಚ್ಚಳದ ವಾದವನ್ನು ಸುಳ್ಳಾಗಿಸುವರು. ಜನಸಂಖ್ಯೆಯು ಜನಶಕ್ತಿ ಸಂಚಯದಿಂದ ಜನ ಸಂಬಂಧದೊಡನೆ ಸಾಮರಸ್ಯ ಪಡೆಯುವುದೇ ಅಂತಿಮವಾಗಿ ಸರ್ವತೋಮುಖವಾದ ಸಾಮಾಜಿಕ ಪ್ರಗತಿಗೆ ಚೇತನ ಶಕ್ತಿಯಾಗಿದೆ. ಜನರ ಉತ್ಪಾದನಾ ವಿಧಾನ, ಜನರ ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆಯೇ ಆರ್ಥಿಕ ಅಭಿವೃದ್ಧಿಯ ಗತಿಯನ್ನು ನಿರ್ಧರಿಸುವುದು. ದೇಶ ವಿದೇಶಗಳೊಳಗಿನ ಆರ್ಥಿಕ ಅಭಿವೃದ್ಧಿಯಲ್ಲಿರುವ ಅಂತರ ಅಸಮತೋಲನಗಳು ಅಲ್ಲಿನ ಸಾಮಾಜಿಕ ವ್ಯವಸ್ಥೆಯ ಪರಿಣಾಮವಾಗಿವೆ. ಆದುದರಿಂದ, ಭಾರತದ ಸಮಕಾಲೀನ ಆರ್ಥಿಕ ಅಭಿವೃದ್ಧಿಯು ಹಿಂದುಳಿದಿರುವುದಕ್ಕೆ ದೇಶದ ಈಗಿನ ಸಾಮಾಜಿಕ ವ್ಯವಸ್ಥೆ-ಆರ್ಥಿಕ ಪದ್ಧತಿ, ಜನಜೀವನ ವಿಧಾನ, ಉತ್ಪಾದನಾ ವಿಧಾನ-ಉತ್ಪಾದನಾ ಶಕ್ತಿಗಳಿಗನುಗುಣವಾಗಿ ಎಂತಹ ಉತ್ಪಾದನಾ ಸಂಬಂಧಗಳಿವೆ ಎಂಬುದನ್ನು ಅವಲಂಬಿಸಿದೆ. ಸ್ವಾತಂತ್ರ್ಯಾನಂತರ ಆರ್ಥಿಕ ಅಭಿವೃದ್ಧಿಯಲ್ಲಿ ನಡೆದು ಬಂದ ದಾರಿ ಯಾವುದು? ಮುಂದಿನ ಬದಲಾವಣೆಯ ದಾರಿ ಯಾವುದು?

[ಮುಂದುವರಿಯುವುದು]

ಮೈಸೂರಿನಲ್ಲಿ ಕಾರ್ಮಿಕ ಸಭೆ ಕಾರ್ಮಿಕ ಹೋರಾಟಕ್ಕೆ ಬೆಂಬಲ

ಸಿ.ಐ.ಟಿ.ಯು. ರಾಜ್ಯ ಸಮಿತಿಯ ಕರೆಯ ಮೇರೆಗೆ ಹೋರಾಟ ನಿರತ ಕಾರ್ಮಿಕರ ಬೆಂಬಲವಾಗಿ ಮೈಸೂರು ನಗರದಲ್ಲಿ ಸೆ 13 ರಂದು ಸೌಹಾರ್ದ ದಿನವನ್ನು ಆಚರಿಸಲಾಯಿತು. ಅಂದು ಮೈಸೂರು ಸಿಲ್ಕ್ ಫ್ಯಾಕ್ಟರಿ ಬಳಿ ನಡೆದ ಬಹಿರಂಗ ಸಭೆಯಲ್ಲಿ ರೈಲ್ವೆ ನೌಕರರು, ರೇಷ್ಮೆ ಕೆಲಸಗಾರರು, ಮೈಸೂರು ಕಾರ್ಪೊರೇಷನ್ನಿನ ಪೌರ ಕಾರ್ಮಿಕರು ಭಾಗವಹಿಸಿದ್ದರು.

ಸಿ.ಐ.ಟಿ.ಯು. ರಾಜ್ಯ ಸಮಿತಿಯ ಉಪಾಧ್ಯಕ್ಷ ಕಾಂ. ಎಂ.ಎಸ್. ಉಗ್ರಪ್ಪ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ ಯಾವುದೇ ಕಾರ್ಮಿಕರ ಹೋರಾಟಕ್ಕೆ ಎಲ್ಲ ಕಾರ್ಮಿಕರು ಮತ್ತು ಸಾರ್ವಜನಿಕರು ಬೆಂಬಲ ಕೊಡಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಸಿ. ಐ. ಟಿ. ಯು. ಮುಖಂಡತ್ವದಲ್ಲಿ ಕಾರ್ಮಿಕ ವರ್ಗ ಐಕ್ಯತೆಯನ್ನು ಸಾಧಿಸುತ್ತಿರುವ ಕಡೆ ಕಾಂ. ಉಗ್ರಪ್ಪ ಸಭಿಕರ ಗಮನ ಸೆಳೆದರು. ಸೆ. 14 ರಂದು ನಡೆದ ಸಾರ್ವಜನಿಕ ಉದ್ಯಮಗಳ ಕಾರ್ಮಿಕರ ಮುಷ್ಕರಕ್ಕೆ ಸಭೆಯಲ್ಲಿ ಬೆಂಬಲ ವ್ಯಕ್ತಪಡಿಸಲಾಯಿತು. ಸಭೆಯನ್ನು ಉದ್ದೇಶಿಸಿ ರೈಲ್ವೆ ನೌಕರರ ಮುಖಂಡ ಕಾಂ. ಜಿ.ಕೆ. ವೆಂಕಟೇಶ್ ಮಾತನಾಡಿದರು.

ಉ.ಕ. ಜಿಲ್ಲೆ ಜನಸಾಮಾನ್ಯರ ಸಮಾವೇಶ

ಪಕ್ಷಾಂತರಿಗಳ ಹಾವಳಿಯಿಂದ ಸರ್ಕಾರ ಅಭದ್ರವಾಗಿ ಜನಸಾಮಾನ್ಯರ ಭವಿಷ್ಯ ಕರಾಳವಾಗಿದೆ. ಇಂಥ ಸನ್ನಿವೇಶದಲ್ಲಿ ಜನಸಾಮಾನ್ಯರೆಲ್ಲ ಒಂದೆಡೆ ಸೇರಿ ಪರಿಹಾರಗಳನ್ನು ಕಂಡುಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಅಕ್ಟೋಬರ್ 10 ರಂದು ಜಿಲ್ಲೆಯ ಜನಸಾಮಾನ್ಯರ ಸಭೆಯನ್ನು ಸಿರಸಿಯಲ್ಲಿ ಕರೆಯಲಾಗಿದೆ. ಉ. ಕ. ಜಿಲ್ಲಾ ರೈತ ಸಂಘಟನಾ ಸಮಿತಿ ಇದಕ್ಕೆ ಬೆಂಬಲ ನೀಡಿದೆ. ಬ್ಯಾಂಕು, ಸಹಕಾರಿ ಸಂಘದ ಸಾಲದ ವಸೂಲಿ ಕ್ರಮದ ತೊಂದರೆ ನಿವಾರಣೆ, ಗೇಣಿದಾರ ರೈತರಿಂದ ಪರಿಹಾರ ಧನದ ವಸೂಲಿ ರದ್ದತಿ, ಎಸ್. ಎಸ್. ಎಲ್. ಸಿ. ಪರ್ಯಂತರ ಉಚಿತ ಶಿಕ್ಷಣ, ನಿರುದ್ಯೋಗಿಗಳಿಗೆ ಊಟಕ್ಕಾಗಿ ಕೆಲಸ ಯೋಜನೆ, ಜನಸಾಮಾನ್ಯರಿಗೆ ಅಗ್ಗದ ದರದ ಅಂಗಡಿಗಳ ವ್ಯವಸ್ಥೆ ಇತ್ಯಾದಿ ಬೇಡಿಕೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು. ಆರ್.ಜಿ. ಭಟ್ಟ, ಜಿ. ಟಿ. ಹೆಗಡೆ, ಗಜಾನನ ಶರ್ಮಾ, ಯಶವಂತ ಹೆರವಟ್ಟಾ, ಎಂ.ಎಸ್. ಧಾರೇಶ್ವರ, ಎಸ್.ವಿ. ನಿಲೇಕಣಿ, ಗಜಾನನ ಘಾತರಪೇಕರ, ರಮೇಶ ಚೌಧುರಿ, ಜಿ.ವಿ. ಪಂಡಿತ ಇವರುಗಳು ಸಮಾವೇಶದ ನಿರ್ವಾಹಕರಾಗಿದ್ದಾರೆ. ●

ಹೋರಾಡುತ್ತಿರುವ ಕಾರ್ಮಿಕರಿಗೆ ಬೆಂಬಲ

ಬಿಜಾಪುರದ ನಗರಸಭೆ ನೌಕರರ ಸಂಘದ ಸಭೆಯು ದಾಂಡೇಲಿಯ ಫೆರ್ರೋ ಅಲ್ಲೈಡ್ ಕಂಪೆನಿ, ಬೆಂಗಳೂರಿನ ತಾತಗುಣಿ ಎಸ್ಟೇಟ್, ಬಿಜಾಪುರದ ಸೋಮಯ್ಯ ಸಕ್ಕರೆ ಕಾರ್ಖಾನೆಗಳ ಕಾರ್ಮಿಕರ ಹೋರಾಟಗಳಿಗೆ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸುವ ನಿರ್ಣಯಗಳನ್ನು ಅಂಗೀಕರಿಸಿತು. ಕಾರ್ಖಾನೆಗಳ ಲಾಕೌಟ್‌ಗಳನ್ನು ತೆಗೆಯಲು ಮಧ್ಯ ಪ್ರವೇಶಿಸಬೇಕೆಂದು ಸಭೆಯು ಸರ್ಕಾರವನ್ನು ಒತ್ತಾಯಿಸಿತು. ●

ಮಹಿಳಾ ಕಾರ್ಮಿಕರಿಗೆ ಆಶ್ವಾಸನೆ

ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು ಬೆಂಗಳೂರು ಘಟಕವು ಆಗಸ್ಟ್ 16 ರಂದು ಲೇಬರ್‌ಕಮೀಷನರ್ ಶ್ರೀ ಶೆಣೈ ಅವರನ್ನು ಭೇಟಿಮಾಡಿ ಮನವಿಪತ್ರವೊಂದನ್ನು ಸಲ್ಲಿಸಿತ್ತು. ನಗರದಮಹಿಳಾ ಬೀಡಿಕಾರ್ಮಿಕರಿಗೆ ಅವರದೇ ಹೆಸರಿನ ಲಾಗ್ ಬುಕ್ (Log book) ಕೊಡದೆ ಅವರ ಮಕ್ಕಳ ಅಥವಾ ಗಂಡನ ಹೆಸರಿನಲ್ಲಿ ಅದನ್ನು ಕೊಟ್ಟು ಅವರನ್ನು ಹೆರಿಗೆರಜ, ಹೆರಿಗೆಭತ್ತೆಗಳಿಂದ ವಂಚಿಸುತ್ತಿರುವುದನ್ನು ಕೂಡಲೇ ನಿಲ್ಲಿಸಿ ಮಹಿಳೆಯರ ಹೆಸರಿನಲ್ಲೇ ಲಾಗ್ ಬುಕ್ ಕೊಡಬೇಕೆಂದು ಮನವಿಯಲ್ಲಿ ಕೇಳಿಕೊಳ್ಳಲಾಯಿತು.

ಇದೇ ವಿಚಾರಕ್ಕೆ ಸೆಪ್ಟೆಂಬರ್ 10 ಮತ್ತು ಸೆಪ್ಟೆಂಬರ್ 21 ರಂದು ಕ್ರಮವಾಗಿ ಲೇಬರ್ ಆಫೀಸರ್ ನೇಮಿರಾಜಯ್ಯ ಮತ್ತು ಡೆಪ್ಯುಟಿ ಲೇಬರ್‌ಕಮೀಷನರ್ ಶ್ರೀ ಮಲ್ಲಿಕಾರ್ಜುನಯ್ಯ ಅವರ ಸಮಕ್ಷಮದಲ್ಲಿ ನಡೆದ ಸಭೆ-ಚರ್ಚೆಯಲ್ಲಿ ಮಹಿಳಾ ಬೀಡಿಕಾರ್ಮಿಕರಾದ ಜೀನತ್ ಉನ್ನಿಸಾ, ಮಹಬೂಬಿ, ಫಾತಿಮಾಬಿ, ಪ್ಯಾರೀಜಾನ್ ಮತ್ತು ಸಮನ್ವಯ ಸಮಿತಿಯ ಸದಸ್ಯೆಯರಾದ ಎಸ್. ಮಾಲತಿ, ಆ್ಯನ್ ಬ್ರಟ್ಟೊ, ಮೇರಿವರ್ಗಿಸ್, ಬೃಂದಾ ನಾಯಕ್ ಇವರುಗಳಲ್ಲದೆ, ಗಣೇಶ ಬೀಡಿಯ ಅಂಗಸಂಸ್ಥೆ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಮ್ಯಾನೇಜರ್ ವಿಶ್ವನಾಥ ಹಾಜರಿದ್ದರು.

ಇಲ್ಲಿ ನಡೆದ ತೀವ್ರ ಚರ್ಚೆಯಲ್ಲಿ, ಎಲ್ಲಾ ಮಹಿಳಾ ಬೀಡಿಕಾರ್ಮಿಕರಿಗೂ ಅವರದೇ ಹೆಸರಿನ ಲಾಗ್ ಬುಕ್ ಕೊಡುವುದಲ್ಲದೆ, ಈ ಹಿಂದೆ ಬೇರೆ ಹೆಸರಿನಲ್ಲಿ ಕೊಟ್ಟಿರುವುದನ್ನು ಬದಲಾಯಿಸುವುದಾಗಿ ಮ್ಯಾನೇಜರ್ ವಿಶ್ವನಾಥ್ ಆಶ್ವಾಸನೆ ನೀಡಿದರು.

○

ಸಂಪಾದಕೀಯ

[ಒಂದನೇ ಪುಟದಿಂದ]

ಳನ್ನು ಹಾಕುತ್ತಿದ್ದಾರೆ. ಇನ್ನೊಂದು ದಶಕ ಚೈನಾ ದೇಶವನ್ನು ಮುಂದುವರಿದ ದೇಶಗಳ ಶ್ರೇಣಿಗೆ ತಲುಪುವ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಆದರೆ ಚೈನಾದ ನಾಯಕತ್ವ ಅನುಸರಿಸುವ ಕೆಲವು ವಿದೇಶಾಂಗ ನೀತಿಗಳ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ವಿರೋಧ ವ್ಯಕ್ತಪಡಿಸಿದೆ. ಜಗತ್ತನ್ನು ಮೂರು ಭಾಗವಾಗಿ ವಿಭಜಿಸುವ ವಾದವನ್ನೂ, ಸೋವಿಯತ್ ರಷ್ಯವೇ ಪ್ರಥಮ ಶತ್ರುವೆಂಬುದನ್ನೂ, ರಷ್ಯ ಸಮಾಜವಾದಿ ರಾಷ್ಟ್ರವಲ್ಲವೆಂಬುದನ್ನೂ, ಇತ್ಯಾದಿ ಅನೇಕ ನೀತಿಗಳನ್ನು ನಾವು ವಿರೋಧಿಸುತ್ತೇವೆ. ಈಚೆಗೆ ಅವರು ವಿಯೆಟ್ನಾಂ ಮೇಲೆ ಮಾಡಿದ ಧಾಳಿಯನ್ನು ನಾವು ತೀವ್ರವಾಗಿ ಖಂಡಿಸಿದ್ದೇವೆ. ಹಾಗೆನೇ ಸೋವಿಯತ್ ವಿರೋಧಿ ಅಂಥ ನೀತಿಯ ಪರಿಣಾಮವಾಗಿ ಚೈನಾದ ನಾಯಕತ್ವ ಸಾಮ್ರಾಜ್ಯಶಾಹಿಗಳ ಪರವಾಗಿ ವರ್ತಿಸುತ್ತಿದೆ. ಇದು ಖಂಡನೀಯವಾಗಿದೆ.

ಚೈನಾದ ನಾಯಕತ್ವವು ಈ ತಪ್ಪುದಾರಿಯನ್ನು ಬಿಟ್ಟು ಇತರ ಸಮಾಜವಾದಿ ಶಕ್ತಿಗಳೊಂದಿಗೆ ಸೇರಿಕೊಂಡು ಸಾಮ್ರಾಜ್ಯಶಾಹಿ ವಿರೋಧ ಹೋರಾಡುತ್ತಿರುವ ಜನತೆಗೆ ಬೆಂಬಲ ಕೊಡುವುದೆಂದು ನಾವು ನಂಬಿದ್ದೇವೆ.

ಚೈನಾದ ಕ್ರಾಂತಿಯು ಜಗತ್ತಿನ ದುಡಿಯುವ ಜನತೆಗೆ ಸ್ಫೂರ್ತಿದಾಯಕವಾಗಿದೆ. ಚೈನಾದ ಪ್ರಗತಿಯು ಎಲ್ಲರಿಗೂ ಸ್ಫೂರ್ತಿ ನೀಡಿದೆ. ಬಂಡವಾಳಶಾಹಿ ವ್ಯವಸ್ಥೆಯಿಂದ ಸಮಾಜವಾದಿ ಸಮಾಜ ವ್ಯವಸ್ಥೆಯು ಹಿರಿದಾದುದೆಂಬುದನ್ನು ತೋರಿಸಿಕೊಟ್ಟಿದೆ. ಚೈನಾದ ಸಮಾಜವಾದಿ ವ್ಯವಸ್ಥೆಯು ಯಶಸ್ವಿಯಾಗಿ ಮುಂದುವರಿದು ಜಗತ್ತಿಗೆ ಮಾರ್ಗದರ್ಶನ ನೀಡಲೆಂದು ನಮ್ಮ ಹಾರೈಕೆ. ●

ಬನ್ಸೀಲಾಲರ ವಿರುದ್ಧ ಕೇಸನ್ನು ಹಿಂತೆಗೆದುದರ ಹಿನ್ನೆಲೆ

[ಒಂದನೇ ಪುಟದಿಂದ]

ಅಲ್ಲದೆ, ಜನತೆಗೆ ಅದರಲ್ಲೂ ಮುಖ್ಯವಾಗಿ ಹರಿಯಾಣ ಜನತೆಗೆ ಕರೆನೀಡುವುದೇನೆಂದರೆ, ಮೇಲಿನ ಎಲ್ಲಾ ವಿಷಯಗಳನ್ನು ಚುನಾವಣೆಯ ದಿನ ನೆನಪಿನಲ್ಲಿ ಇಟ್ಟುಕೊಂಡು, ಸರ್ವಾಧಿಕಾರಿ ಹಾಗೂ ಜಾತೀಯವಾದಿ ಶಕ್ತಿಗಳನ್ನು ಪ್ರತಿನಿಧಿಸುವ ಇಂದಿರಾಗಾಂಧಿ ಕಾಂಗ್ರೆಸ್ ಹಾಗೂ ಜನತಾಪಕ್ಷಗಳೆರಡನ್ನೂ ತಿರಸ್ಕರಿಸಲು ಕರೆ ನೀಡಿದೆ.

●

ಯರಮರಸ್ ನೂಲಿನ ಗಿರಣಿ : ಸಿ. ಐ. ಟಿ. ಯು. ಸಮಿತಿ ರಚನೆ

ರಾಯಚೂರು ಜಿಲ್ಲೆಯ ಯರಮರಸ್ ನೂಲಿನ ಗಿರಣಿಯಲ್ಲಿ ಸಿ.ಐ.ಟಿ.ಯು. ಕಾರ್ಮಿಕ ಸಂಘಟನೆಯನ್ನು ಇತ್ತೀಚೆಗೆ ಸ್ಥಾಪಿಸಲಾಯಿತು. 25 ಜನರ ಕಾರ್ಯಕಾರಿ ಸಮಿತಿಯನ್ನು ರಚಿಸಿ ಕಾಂ. ಗಂಗಾಧರನಾಮೋಶಿ ಅಧ್ಯಕ್ಷರಾಗಿಯೂ, ಕಾಂ. ನರಸಿಂಹಲು, ಕಾಂ. ರಾಮಲು ಉಪಾಧ್ಯಕ್ಷರಾಗಿಯೂ, ಕಾಂ. ಚಂದ್ರಶೇಖರ್ ಬಾಳಿ ಪ್ರಧಾನಕಾರ್ಯದರ್ಶಿಯಾಗಿಯೂ ಆಯ್ಕೆಗೊಂಡರು. ಕಾಂ. ಪುರುಷೋತ್ತಮ ಕಲಾಲಬಂಡಿ, ಜಿ. ಸುರೇಶ್, ಮಹಮದ್ ಜಾಫರ್, ಹನುಮಂತು ಮುಂತಾದವರು ಪದಾಧಿಕಾರಿಗಳಾಗಿಯೂ ಆಯ್ಕೆಗೊಂಡರು.

○

ಸಂಘಟಿತ ಹೋರಾಟಕ್ಕೆ ಕಾರವಾರ ಜಿಲ್ಲೆಯ ಟೆಲಿಗ್ರಾಫ್ ಕಾರ್ಮಿಕರು

ಐದು ರೂಪಾಯಿ ದಿನಗೂಲಿ, ಉದ್ಯೋಗದ ಭದ್ರತೆಯಿಲ್ಲ. ಇದು ಕೇಂದ್ರ ಸರ್ಕಾರದ ಟೆಲಿಗ್ರಾಫ್ ಮತ್ತು ಟೆಲಿಫೋನ್ಸ್‌ನಲ್ಲಿ ದುಡಿಯುತ್ತಿರುವ ಅನೇಕ ಕಾರ್ಮಿಕರ ದುರ್ಗತಿ. ಬಹುಶಃ ಜಗತ್ತಿನ ಹಲವು ಅದ್ಭುತಗಳಲ್ಲಿ ಇದೂ ಒಂದು.

ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ಉಡುಪಿಯ ಜೀವವಿಮಾ ನೌಕರರ ಮುಖಂಡ ಬಿ. ಮಾಧವ ಅವರು. ಅವರು ಕರ್ನಾಟಕ ರಾಜ್ಯ ವಲಯ ಟೆಲಿಫೋನ್ ಮತ್ತು ಟೆಲಿಗ್ರಾಫ್ ಮಜ್ದೂರ್ ಸಂಘದ ಕಾರವಾರ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಸಂಘದ ಉದ್ಘಾಟನೆಯನ್ನು ಮಾಡಿದ ಅಧ್ಯಕ್ಷ ಬಿ. ರಾಮಕೃಷ್ಣ ಅವರು ಅಸಂಘಟಿತ ಕಾರ್ಮಿಕರನ್ನು ಸಂಘಟಿಸಿ ಅಸಮಾನತೆಯನ್ನು ಕೊನೆಗೊಳಿಸಬೇಕೆಂದು ಹೇಳಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಜ್ಯೂನಿಯರ್ ಎಂಜಿನಿಯರ್ ಆರ್. ಎನ್. ಪೈ ಅವರು ಮಾತನಾಡಿ ಕಾರ್ಮಿಕರ ದಾರುಣ ಪರಿಸ್ಥಿತಿಯನ್ನು ಅಂತ್ಯಗೊಳಿಸಲು ಸಂಘಟಿತ ಹೋರಾಟದಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಸಿ. ಆಂಡಿ, ಜಬ್ಬಾರ್, ಮುಕುಂದನ್ ಮತ್ತು ರಮೇಶ್ವರನ್ ಅವರೂ ಸಭೆಯಲ್ಲಿ ಮಾತನಾಡಿದರು.

ಹಾಗೆಯೇ, 1979-80ಕ್ಕೆ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಇದರ ವಿವರ: 1. ಸಿ. ಆಂಡಿ-ಅಧ್ಯಕ್ಷ 2. ರಾಮನ್ ಕುಟ್ಟಿ-ಉಪಾಧ್ಯಕ್ಷ 3. ಪಿ. ಮುಕುಂದನ್-ಕಾರ್ಯದರ್ಶಿ 4. ರಾಜುಶೆಟ್ಟಿ-ಸಹಕಾರ್ಯದರ್ಶಿ 5. ಅಂಬು ಕುಂಜು-ಕೋಶಾಧಿಕಾರಿ. ಕಾರ್ಯಸಮಿತಿ ಸದಸ್ಯರು: 1. ಎಂ. ನಾರಾಯಣ 2. ಮ್ಯಾಥ್ಯೂ 3. ಕೆ. ಪಿ. ಕಣ್ಣನ್ 4. ನಾರಾಯಣನ್ ಪಿ. 5. ಸೋಮ 6. ತಂಗಚ್ಚನ್ 7. ಪರಶು.

○

ಕಕ್ಕಿಂಜೆಯಲ್ಲಿ ಮಜೂರ ಕಾರ್ಯಾಲಯ ಆರಂಭ

ದ. ಕನ್ನಡ ಜಿಲ್ಲೆಯ ಕಕ್ಕಿಂಜೆ ಚಾರ್ಮಾಡಿ, ನೆರಿಯ, ಕಳೆಂಜ, ಚಿಬಿದ್ರೆ, ಕಲ್ಮಂಜ ಗ್ರಾಮವಲಯದ ಕೃಷಿ ಕಾರ್ಮಿಕರ ಮತ್ತು ಬೀಡಿ ಕಾರ್ಮಿಕರ, ರೈತಸಂಘಗಳ ಕಾರ್ಯಾಲಯವು ಇಲ್ಲಿ ಉದ್ಘಾಟನೆಯಾಯಿತು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಜನಾರ್ಧನ ನಾಯಕ್ ಅವರು ಉದ್ಘಾಟನೆ ನೆರವೇರಿಸಿದರು. ರೈತ ಕಾರ್ಮಿಕರ ಬೃಹತ್ ಮೆರವಣಿಗೆ ಸಭಾಸ್ಥಳಕ್ಕೆ ಬಂದು ಸೇರುತ್ತಲೇ ಕಾಂ. ಕೆ. ವಿ. ರಾಯರು ಸ್ವಾಗತಿಸಿದರು. ಕಾರ್ಯಾಲಯದ ಪೂರ್ಣಕಾಲೀನ ಕಾರ್ಯದರ್ಶಿ ಕೆ. ಎಲ್. ಮಂಜುನಾಥ್ ಅವರು ವಂದನಾರ್ಪಣೆ ಮಾಡಿದರು. ಕಾಂ. ಪಾಪಚ್ಚನ್, ಜನಾರ್ಧನ್ ಮೊದಲಾದವರು ಸಭೆ, ಮೆರವಣಿಗೆ ಕಾರ್ಯಾಲಯದ ನಿರ್ಮಾಣ ಕೆಲಸಗಳಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

●

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸಲಾಗಿದೆ. ಮುಂದಿನ ಸಂಚಿಕೆಯಿಂದ ಪ್ರಣಾಳಿಕೆಯ ಪೂರ್ಣ ಪಾಠವನ್ನು ಪ್ರಕಟಿಸಲಾಗುವುದು.

ಪರಿಸರ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೀತಿಗಳನ್ನು ನೀವು ಒಪ್ಪಿ ಅಥವ ಬಿಡಿ. ಆ ಪಕ್ಷವಂತೂ ತತ್ವನಿಷ್ಟ ಪಕ್ಷವೆಂದು ಅದರ ಶತ್ರುಗಳೂ ಒಪ್ಪಬೇಕು.

—"ಕನ್ನಡ ಪ್ರಭ"

ಕೇರಳದ ಜನಸಮೂಹದ ನಡುವೆ ಬೆಳೆದು ನಿಂತಿರುವ ಒಂದೇ ಒಂದು ಪಕ್ಷವೆಂದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ. ಇತ್ತೀಚೆಗೆ ಆ ರಾಜ್ಯದಲ್ಲಿ ನಡೆದ ಪಂಚಾಯತ್ ಚುನಾವಣೆಗಳು ಇದನ್ನು ಸಾಬೀತು ಮಾಡಿವೆ.

—"ಫೈನಾನ್ಶಿಯಲ್ ಎಕ್ಸ್‌ಪ್ರೆಸ್"

ಇಂದಿರಾಗಾಂಧಿಯ ವಿರುದ್ಧ ಇರುವ ಎಲ್ಲಾ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳಬೇಕು.

—ಬಾಳಾಸಾಹೇಬ್ ದೇವರಸ್
(ಆರ್.ಎಸ್.ಎಸ್. ಮುಖ್ಯಸ್ಥ)

ಇಂದಿರಾಕಾಂಗ್ರೆಸ್ ಪಕ್ಷ ಮತ್ತು ಆರ್. ಎಸ್. ಎಸ್. ಒಂದೇ ನಾಣ್ಯದ ಎರಡು ಮುಖಗಳಂತೆ ವರ್ತಿಸುತ್ತಿವೆ.

—ರಬಿರಾಯ್
(ಕೇಂದ್ರ ಆರೋಗ್ಯ ಸಚಿವ)

ನಾಡಿನ ಕೆಲವು ರಾಜ್ಯಗಳಲ್ಲಿ ಭೀಕರ ಬರಗಾಲ. ಇನ್ನು ಕೆಲವು ರಾಜ್ಯಗಳಲ್ಲಿ ವಿಪರೀತ ಪ್ರವಾಹದ ಹಾವಳಿ. ದೇಶದುದ್ದಗಲಕ್ಕೂ ಬೆಲೆ ಏರಿಕೆ, ನಿರುದ್ಯೋಗ ಮತ್ತು ಹಣದುಬ್ಬರದ ಸಮಸ್ಯೆಗಳು ಜನತೆಯನ್ನು ಬಾಧಿಸುತ್ತಿರುವ ಈ ಸಮಯದಲ್ಲಿ ನಮ್ಮ ಜನ ಮಧ್ಯಕಾಲೀನ ಚುನಾವಣೆಯನ್ನು ಎದುರಿಸಬೇಕಾಗಿದೆ.

—ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ
ಹೊರಡಿಸಿರುವ ಚುನಾವಣಾ ಕರಪತ್ರದಲ್ಲಿ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT